# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY








ಸಂಪುಟ:02 • ಸಂಚಿಕೆ:03 • ನೋಂದಣಿ ಸಂ.:KARKAN27911 • ವಿಜಯನಗರ • 23.06.2024 • ಭಾನುವಾರ • ಪುಟ:04 • ಬೆಲೆ:2
Volume:02 • Issue:03 • Reg.No:KARKAN27911 • VIJAYANAGARA • 23.06.2024 • Sunday • Page:04 • Rs:2







> ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
> ಡಿ.ವಿ.ಜಿ.

## ಕಾನೂನು ಪದವೀಧರರ ವೃತ್ತಿ ತರಬೇತಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

2024–25ನೇ ಸಾಲಿನಲ್ಲಿ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಹಿಂದುಳಿದ ವರ್ಗದ ಕಾನೂನು ಪದವೀಧರರಿಗೆ ಕಾನೂನು ತರಬೇತಿ ಭತ್ಯೆಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ವಿಜಯನಗರ ಜಿಲ್ಲೆಯ ಹಿಂದುಳಿದ ಕಲ್ಯಾಣ ಇಲಾಖೆ ಕಚೇರಿಗೆ ಜುಲೈ 20 ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಸುವ ಅಭ್ಯರ್ಥಿಯು ವಿಜಯನಗರ ಜಿಲ್ಲೆಯವರಾಗಿರಬೇಕು, ಸರ್ಕಾರಿ ಆದೇಶ ಸಂಖ್ಯೆ: >>4

# ಸಿಸಿ ರಸ್ತೆ ಅಗೆದು ಮರೆತ ನಗರಸಭೆ! ಕತ್ತಲಲ್ಲಿ ಕಾಲುವೆಗೆ ಬಿದ್ದರೆ ಯಾರು ಹೊಣೆ?

**ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಅಭಿವೃದ್ಧಿ ಕಾಮಗಾರಿಗಳ ನೆಪದಲ್ಲಿ ಸಿಸಿ ರಸ್ತೆ ಅಗೆಯಲಾಗಿದೆ. ಆದರೆ ನಿತ್ಯ ವಾಹನ ಸಂಚಾರವಿರುವ ರಸ್ತೆಗಳನ್ನು ಅಗೆದು ಮೂರು ತಿಂಗಳಾದರೂ ಕಾಮಗಾರಿ ಪೂರ್ಣಗೊಳಿಸದೆ, ಅಗೆದ ರಸ್ತೆಯನ್ನು ಸಮಗೊಳಿಸದೇ ಹಾಗೇ ಬಿಟ್ಟು ವಾಹನ ಸವಾರರ ಜೀವದ ಜೊತೆ ಚೆಲ್ಲಾಟವಾಡುತ್ತಿದೆಯಾ ನಗರಸಭೆ ಎಂದು ಜನರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಈ ರಸ್ತೆಯಲ್ಲಿ ನಿತ್ಯ ರೈತರು ತಮ್ಮ ಕೃಷಿ ಕಾರ್ಯಗಳಿಗೆ ತೆರಳುತ್ತಾರೆ. ಹಳೆ ಅಮರಾವತಿ ಪ್ರದೇಶ, ಟಿ.ಬಿ.ಡ್ಯಾಂ ಜನರು ಇದೇ ರಸ್ತೆಯನ್ನು ಅವಲಂಬಿಸಿದ್ದಾರೆ. ನಾಲ್ಕು ಚಕ್ರದ ವಾಹನಗಳು ಓಡಾಡ ದಂತಾಗಿದೆ. ರಾತ್ರಿ ವೇಳೆ ಬೀದಿ ದೀಪಗಳು ಇಲ್ಲದ್ದರಿಂದ ವಾಹನ ಸವಾರರು ಬ್ಯಾಲೆನ್ಸ್ ತಪ್ಪುತ್ತಿದ್ದಾರೆ. ಈಗಾಗಲೇ ಕೆಲವರು ಬಿದ್ದು ಆಡಳಿತ ವ್ಯವಸ್ಥೆಯನ್ನು ಶಪಿಸಿದರೆ, ನಾಲ್ಕು ಚಕ್ರದ ವಾಹನಗಳ ಸವಾರರು ಈ ರಸ್ತೆ ಸಂಚಾರವನ್ನು ತ್ಯಜಿಸುವಂತಾಗಿದೆ. ವಾಹನ ಸವಾರರು, ಕೃಷಿ ಚಟುವಟಿಕೆಗಳಿಗೆ ತೆರಳುವ ಎತ್ತಿನ ಬಂಡಿ, ಶಾಲೆಗಳಿಗೆ ಮಕ್ಕಳನ್ನು ಕರೆದೊಯ್ಯುವ ಆಟೋಗಳು ಇದೇ ಮಾರ್ಗದಲ್ಲಿ ಸಂಚರಿಸುತ್ತಿದ್ದು, ಅವಘಡಗಳು ಸಂಭವಿಸುವುದಕ್ಕಿಮತ ಮುನ್ನ ರಸ್ತೆ ದುರಸ್ಥಿಗೊಳಿಸಬೇಕೆಂದು ವಾಹನ ಸವಾರರು ಒತ್ತಾಯಿಸಿದ್ದಾರೆ.

ನಗರಸಭೆ ಅಧ್ಯಕ್ಷರು ಪತ್ರಿಕೆಗೆ ಪ್ರತಿಕ್ರಿಯಿಸಿ, ಯುಜಿಸಿ ಕಾಮಗಾರಿಗಾಗಿ ಅಗೆಯಲಾಗಿತ್ತು, ಲೆವೆಲ್ಲಿಂಗ್ ಸಿಗಲಿಲ್ಲ. ದುರಸ್ತಿಗೆ ತಡವಾಗಿದೆ. ಸೋಮವಾರ ದುರಸ್ತಿ ಮಾಡಿಸಲಾಗುವುದು ಎಂದು ನಗರಸಭೆ ಅಧ್ಯಕ್ಷರು ತಿಳಿಸಿದ್ದಾರೆ. ದುರಸ್ತಿಯಾಗುವುದೇ ಕಾದು ನೋಡಬೇಕಿದೆ.



# ತಗ್ಗಿಗೆ ಗ್ರಾವೆಲ್ ಪ್ರವೇಶ ಸುಗಮ
## ರೋಗಿಗಳ ಆತಂಕ ದೂರಾಗಿಸಿದ ಡಿಎಚ್‌ಒ

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾ ಆರೋಗ್ಯಾಧಿಕಾರಿಗಳ ಕಾರ್ಯಲಯದ ಆವರಣದಲ್ಲಿ ಸಿಸಿ ರಸ್ತೆ ಮಾಡಿ, ಗ್ರಾವೆಲ್ ಹಾಕದೆ ಕೈಬಿಡಲಾಗಿತ್ತು.

ನಗರದಲ್ಲಿ ಇತ್ತೀಚೆಗೆ ಸುರಿದ ಮಳೆಗೆ ವಿಜಯನಗರ ಜಿಲ್ಲಾ ಆರೋಗ್ಯ ವೈದ್ಯಾಧಿಕಾರಿಗಳ ಕಚೇರಿ ಪಕ್ಕದಲ್ಲೇ ಇರುವ ಆಯುರ್ವೇದ ಆಸ್ಪತ್ರೆ ಮುಂಭಾಗದಲ್ಲಿ ಮಳೆ ನೀರು ನಿಂತು ಚಿಕಿತ್ಸೆಗೆ ತೆರಳಲು ಪಾರ್ಶುವಾಯುವ ರೋಗಿಗಳು ತೀವ್ರ ತೋಂದರೆಪಡುತ್ತಿದ್ದರು. ಮಳೆಗೆ ಸಂಚಾರ ಅಸ್ತವ್ಯಸ್ಥೆ, ಪರದಾಡಿದ ರೋಗಿಗಳು ಶೀರ್ಷಿಕೆಯಡಿ ಹಂಪಿ ಟೈಮ್ಸ್ ವರದಿ ಪ್ರಕಟಿಸಿತ್ತು. ವರದಿ ಬೆನ್ನಲ್ಲೇ ಜಿಲ್ಲಾ ವೈದ್ಯಾಧಿಕಾರಿಗಳು ನೀರು ನಿಲ್ಲುತ್ತಿದ್ದ ಗುಂಡಿಗೆ ಗ್ರಾವೆಲ್ ಹಾಕಿಸಿ, ರೋಗಿಗಳು ಚಿಕಿತ್ಸೆಗೆ ಸುಗಮವಾಗಿ ತೆರಳಲು ಅನುಕೂಲ ಕಲ್ಪಿಸಿದ್ದಾರೆ.





ಹಂಪಿ ಟೈಮ್ಸ್

**ಮಳೆಗೆ ಸಂಚಾರ ಅಸ್ತವ್ಯಸ್ಥ, ಪರದಾಡಿದ ರೋಗಿಗಳು**

ಹೊಸಪೇಟೆಯಲ್ಲಿ ಜಿಲ್ಲಾ ವೈದ್ಯಾಧಿಕಾರಿಗಳ ಕಛೇರಿ ಆವರಣದಲ್ಲಿರುವ ಸರ್ಕಾರಿ ಆಯುರ್ವೇದ ಆಸ್ಪತ್ರೆಗೆ ಪಾರ್ಶುವಾಯು ಮತ್ತಿತರ ಕಾಯಿಲೆಗೆ ಚಿಕಿತ್ಸೆ ಪಡೆಯಲು ತೆರಳುವ ರೋಗಿಗಳು, ಆಸ್ಪತ್ರೆಯ ಪ್ರವೇಶದಲ್ಲೇ ತಗ್ಗುಪ್ರದೇಶದಲ್ಲಿ ಮಳೆ ನೀರು ನಿಂತಿದ್ದರಿಂದ ತೀವ್ರ ತೊಂದರೆ ಅನುಭವಿಸಿದರು. ಆಸ್ಪತ್ರೆಗೆ ಬರುವ ರೋಗಿಗಳಿಗೆ ತೊಂದರೆಯಾಗದಂತೆ ಕೂಡಲೇ ಸಂಬಂಧಿಸಿದ ಅಧಿಕಾರಿಗಳು ಅಗತ್ಯ ಕ್ರಮವಹಿಸಬೇಕು ಎಂದು ಚಿಕಿತ್ಸೆಗಾಗಿ ಬಂದಿದ್ದ ಎಸ್.ಎಂ.ಭಾಷ ಆಗ್ರಹಿಸಿದರು.

# ಯೋಗದಿಂದ ದೈಹಿಕ ಸೌಂದರ್ಯ ಹೆಚ್ಚು
## ಯೋಗ ಮಾತೆ ಬಿ.ಗೌರಮ್ಮ ಅಭಿಮತ | ಅಂತರಾಷ್ಟ್ರೀಯ ಯೋಗ ದಿನಾಚರಣೆ



**ಹಂಪಿ ಟೈಮ್ಸ್ ಕೂಡ್ಲಿಗಿ**

ಯೋಗ ಮಾಡಿ ನಿರೋಗಿಗಳಾಗಿ ಎಂದು ಯೋಗ ಮಾತೆ ಬಿ.ಗೌರಮ್ಮ ಹೇಳಿದರು.

ಪಟ್ಟಣದ ಮಹಾದೇವ ಮೈಲಾರ ಕ್ರೀಡಾಂಗಣದಲ್ಲಿ ಶುಕ್ರವಾರ ತಾಲೂಕು ಆಡಳಿತ, ಸರ್ಕಾರಿ ನೌಕರರ ಸಂಘ, ಪತಂಜಲಿ ಯೋಗ ಸಮಿತಿ, ಮೈದಾನ ಗೆಳೆಯರ ಬಳಗ, ಜೆಸಿಐ, ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ವಿಜಯವಾಣಿ ಸಹ ಯೋಗದೊಂದಿಗೆ ಏರ್ಪಡಿಸಿದ್ದ ಅಂತರಾಷ್ಟ್ರೀಯ 10ನೇ ಯೋಗ ದಿನಾಚರಣೆಯಲ್ಲಿ ಸಾರ್ವಜನಿಕರಿಗೆ ಯೋಗಭ್ಯಾಸ ತಿಳಿಸಿ ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ವಿಶ್ವಾದ್ಯಂತ ಹೆಚ್ಚಿನ ಜನರು ತಮ್ಮ ಮಾನಸಿಕ ಒತ್ತಡ ಮತ್ತು ದೈಹಿಕ ಸೌಂದರ್ಯಕ್ಕಾಗಿ ಯೋಗದ ಮೊರೆ ಹೋಗುತ್ತಿದ್ದಾರೆ. ಯೋಗವು ಮನಸ್ಸು ಮತ್ತು ದೇಹವನ್ನು ಸಂಪರ್ಕಿಸುವ ಪ್ರಾಚಿನ ಕಲೆಯಾಗಿದೆ. ಭಾರತವು ಜಗತ್ತಿಗೆ ನೀಡಿದ ಒಂದು ದೊಡ್ಡ ಕೊಡುಗೆ ಯೋಗವಾಗಿದೆ. ಯೋಗವು 6,000 ವರ್ಷಕ್ಕೂ ಹಳೆಯದಾದ ಭೌತಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಅಭ್ಯಾಸವಾಗಿದೆ ಎಂದು ತಿಳಿಸಿದರು.

ಮನುಷ್ಯನ ಮನಸ್ಸಿಗೆ ಶಾಂತಿ ಸಿಗಬೇಕಾದರೆ ಏಕಾಗ್ರತೆ ಮುಖ್ಯ ಇದು ಸಿಗುವುದು ಯೋಗದಲ್ಲಿ ಮಾತ್ರ ಹಾಗಾಗಿ ಇಂದು ಹೆಚ್ಚಿನ ಜನ ಯೋಗದತ್ತ ಚಿತ್ತ ಹರಿಸಿದ್ದಾರೆ. ಯೋಗದಿಂದ ಮನುಷ್ಯನಿಗೆ ಧನಾತ್ಮಕ ಬದಲಾವಣೆಗಳು ಬರುತ್ತವೆ. ಯೋಗದ ಮೂಲಕ ನಮಗೆ ಜ್ಞಾನೋದಯವಾಗುತ್ತದೆ ಎಂದು ಹೇಳಿದ ಅವರು, ಯುವ ಪೀಳಿಗೆಯು ಯೋಗಾಭ್ಯಾಸ ಮಾಡಿ ರಾಷ್ಟ್ರಕ್ಕೆ ಅಮೂಲ್ಯ ಕೊಡುಗೆಗಳನ್ನು ನೀಡುವಂತೆ ಕೋರಿದರು.

ಬಿಇಒ ಪದ್ಮನಾಭ ಕರಣಂ, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಪಿ.ಶಿವರಾಜ್, ಕಾರ್ಯದರ್ಶಿ ನಾಗರಾಜ ಕೊಟ್ರಪ್ಪನವರ್, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಎಸ್.ವಿ.ಸಿದ್ದರಾಧ್ಯ, ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಅಧ್ಯಕ್ಷ ವೀರೇಶ್ ಅಂಗಡಿ, ಜೆಸಿಐ ಗೋಲ್ಡನ್ ಅಧ್ಯಕ್ಷ ಶ್ರೀಧರ ರಾಯ್ಕರ್, ಸಪಪೂ ಕಾಲೇಜು ಪ್ರಾಚಾರ್ಯೆ ಟಿ.ಕೊತ್ಲಮ್ಮ, ಪಿ.ಪಂಪಾಪತಿ, ಜಿಲಾನ್, ರಜತ್, ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕ ಟಿ.ಬಸವರಾಜ, ಉಪನ್ಯಾಸಕ ಪಿ.ಉಮೇಶ್ ಇದ್ದರು. ಇದೇ ಸಂಧರ್ಭದಲ್ಲಿ ಉದ್ಯಮಿ ಚನ್ನಶೇಖರ ಹುಟ್ಟುಹಬ್ಬದ ಅಂಗವಾಗಿ ಯೋಗಭ್ಯಾಸ ಮಾಡಿದ ಸಾರ್ವಜನಿಕರಿಗೆ ಉಚಿತ ಹಣ್ಣಿನ ಗಿಡಗಳನ್ನು ನೀಡಲಾಯಿತು.

# ಮೂರು ತಿಂಗಳಿಗೊಮ್ಮೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಿ
## ಸರ್ಕಾರಿ ನೌಕರರಿಗೆ ಆರೋಗ್ಯ ತಪಾಸಣೆ ಶಿಬಿರದಲ್ಲಿ ಡಾ.ಹಾಲಸ್ವಾಮಿ ಹೇಳಿಕೆ



**ಹಂಪಿ ಟೈಮ್ಸ್ ಹರಪನಹಳ್ಳಿ**

ಪ್ರತಿಯೊಬ್ಬರೂ 30 ವರ್ಷದ ನಂತರ ಪ್ರತಿ ಮೂರು ತಿಂಗಳಿಗೊಮ್ಮೆ ಅರೋಗ್ಯ ತಪಾಸಣೆ ಮಾಡಿಸಿಕೊಳ್ಳಿ. ಖಾಯಿಲೆ ಬಂದ ಮೇಲೆ ತಪಾಸಣೆ ಮಾಡಿಸಿಕೊಳ್ಳುವುದು ಸಹಜ ಆದರೆ ಕಾಯಿಲೆ ಬರುವ ಮೊದಲು ತಪಾಸಣೆ ಮಾಡಿಸಿಕೊಂಡರೆ ಮುಂದಾಗುವ ತೊದರೆಯನ್ನು ತಪ್ಪಿಸಬಹುದು ಎಂದು ತಾಲೂಕು ವೈದ್ಯಾಧಿಕಾರಿ ಡಾ.ಹಾಲಸ್ವಾಮಿ ಹೇಳಿದರು.

ನಗರದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಬಾಲಕಿಯರ ಶಾಲೆಯಲ್ಲಿ ತಾಲ್ಲೂಕು ಅರೋಗ್ಯಧಿಕಾರಿಗಳ ಕಚೇರಿ ಹಾಗೂ ಸಾರ್ವಜನಿಕ ಆಸ್ಪತ್ರೆ ಹರಪನಹಳ್ಳಿ ವತಿಯಿಂದ ಹಮ್ಮಿಕೊಂಡಿದ್ದ >>4




## ವಿಜ್ಞಾನ

### ಮಿಂಚುಹುಳುಗಳು ಕತ್ತಲೆಯಲ್ಲಿ ಏಕೆ ಹೊಳೆಯುತ್ತವೆ?

■ ಆರ್.ಬಿ.ಗುರುಬಸವರಾಜ

ಮಳೆಗಾಲದ ರಾತ್ರಿಯಲ್ಲಿ ಊಟದ ನಂತರ ತಾತನೊಂದಿಗೆ ವಾಕಿಂಗ್ ಮಾಡುತ್ತಿದ್ದ ಸುಮತಿ ಕಣ್ಣಿಗೆ ಮಿಂಚುಹುಳು ಕಾಣಿಸಿತು. ತಕ್ಷಣ ಹಿಡಿಯಲು ಹೊರಟಳು. ತಾತ ಅವಳನ್ನು ತಡೆದು ಅದನ್ನು ಹಿಡಿಯಬಾರದು ಎಂದು ಹೇಳಿದರು. "ತಾತ, ಮಿಂಚುಹುಳುವಿಗೆ ಲೈಟ್ ಎಲ್ಲಿಂದ ಬಂತು. ಅದರ ಸ್ವಿಚ್ ಎಲ್ಲಿದೆ?" ಎಂದಳು. ಮಿಂಚುಹುಳು ಕತ್ತಲೆಯಲ್ಲಿ ಹೊಳೆಯಲು ಕಾರಣವನ್ನು ತಾತ ತಿಳಿಸತೊಡಗಿದರು.

ಮಿಂಚುಹುಳುಗಳು 'ಬಯೋಲುಮಿನೆಸೆನ್ಸ್' ಎಂದು ಕರೆಯಲ್ಪಡುವ ಪ್ರಕ್ರಿಯೆಯ ಮೂಲಕ ಬೆಳಕನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿವೆ. ಬಯೋಲ್ಯುಮಿನೆಸೆನ್ಸ್ ಎನ್ನುವುದು ರಾಸಾಯನಿಕ ಕ್ರಿಯೆಯ ಮೂಲಕ ಜೀವಂತ ಜೀವಿಯಿಂದ ಬೆಳಕಿನ ಉತ್ಪಾದನೆ ಮಾಡುವ ಮತ್ತು ಹೊರಸೂಸುವ ಪ್ರಕ್ರಿಯೆಯಾಗಿದೆ.



ಮಿಂಚುಹುಳುವಿನ ಕಿಬ್ಬೊಟ್ಟೆಯಲ್ಲಿನ ರಸಾಯನಿಕ ಕ್ರಿಯೆಯ ಮೂಲಕ ಬೆಳಕು ಉತ್ಪಾದನೆಯಾಗುತ್ತದೆ. ಈ ಪ್ರತಿ ಕ್ರಿಯೆಯಲ್ಲಿ 'ಲೂಸಿಫೆರೇಸ್' ಎಂಬ ಕಿಣ್ವವನ್ನು ಒಳಗೊಂಡಿರುತ್ತದೆ. ಇದು ಲೂಸಿಫೆರಿನ್ ಎಂಬ ಅಣುವಿನೊಂದಿಗೆ ಪ್ರತಿಕ್ರಿಯಿಸುವ ಪರಿಣಾಮವಾಗಿ ಬೆಳಕನ್ನು ಉತ್ಪಾದಿಸುತ್ತದೆ. ಇದು ಆಮ್ಲಜನಕದ ಉಪಸ್ಥಿತಿಯಲ್ಲಿ ಬೆಳಕನ್ನು ಉತ್ಪಾದಿಸುತ್ತದೆ. ರಾಸಾಯನಿಕ ಕ್ರಿಯೆಯಿಂದ ಉತ್ಪತ್ತಿಯಾಗುವ ಸುಮಾರು 100% ಶಕ್ತಿಯು ಬೆಳಕಿಗೆ ಪರಿವರ್ತನೆಗೊಳ್ಳುತ್ತದೆ. ಮಿಂಚುಹುಳುಗಳು ತಮ್ಮ ಬೆಳಕನ್ನು ಆನ್ ಮತ್ತು ಆಫ್ ಮಾಡುವ ಸಾಮರ್ಥ್ಯವನ್ನು ಹೊಂದಿವೆ.

ಒಂದೇ ಜಾತಿಯ ಮಿಂಚುಹುಳುಗಳ ನಡುವಿನ ಸಂವಹನ ಮಾಡುವುದು ಮತ್ತು ಸಂಯೋಗ ಹೊಂದುವುದು ಬಯೋಲುಮಿನೆಸೆನ್ಸ್‌ನ ಉದ್ದೇಶವಾಗಿದೆ. ಗಂಡು ಮಿಂಚುಹುಳುಗಳು ಹೆಣ್ಣಿನ ಗಮನವನ್ನು ಸೆಳೆಯಲು ನಿರ್ದಿಷ್ಟ ಮಾದರಿಯಲ್ಲಿ ಬೆಳಕನ್ನು ಹೊರಸೂಸುತ್ತದೆ. ಹೆಣ್ಣು ಆಸಕ್ತಿಯಿದ್ದರೆ ತನ್ನದೇ ಆದ ಮಿನುಗುವ ಮಾದರಿಯೊಂದಿಗೆ ಪ್ರತಿಕ್ರಿಯಿಸುತ್ತದೆ.

ಮಿಂಚುಹುಳುಗಳು ತಮ್ಮ ಬೆಳಕನ್ನು ಪರಭಕ್ಷಕಗಳಿಗೆ ಎಚ್ಚರಿಕೆಯಾಗಿಯೂ ಬಳಸುತ್ತವೆ. ಏಕೆಂದರೆ ಬೆಂಕಿಯ ಕಿಡಿಯೊಂದು ಹಾರುತ್ತಾ ಹೋದ ಅನುಭವ ನೀಡುತ್ತದೆ ಅಥವಾ ವಿಷಕಾರಿ ರಾಸಾಯನಿಕವನ್ನು ಹೊಂದಿದೆ ಎಂದು ಸೂಚಿಸುತ್ತದೆ. ಮಿನುಗುವ ಬೆಳಕು ಮಿಂಚುಹುಳುಗಳಿಗೆ ತಮ್ಮದೇ ಜಾತಿಯ ಸದಸ್ಯರನ್ನು ಗುರುತಿಸಲು ಸಹಾಯ ಮಾಡುತ್ತದೆ.

ಒಟ್ಟಾರೆಯಾಗಿ ಮಿಂಚುಹುಳುಗಳು ಬೆಳಕನ್ನು ಉತ್ಪಾದಿಸುವ ಸಾಮರ್ಥ್ಯವು ಗಮನಾರ್ಹವಾದ ರೂಪಾಂತರವಾಗಿದೆ. ಇದು ಲಕ್ಷಾಂತರ ವರ್ಷಗಳಿಂದ ವಿಕಸನಗೊಂಡಿದೆ. ಈ ಕ್ರಿಯೆಯು ಅವುಗಳ ನೈಸರ್ಗಿಕ ಆವಾಸಸ್ಥಾನಗಳಲ್ಲಿ ಅಭಿವೃದ್ಧಿ ಹೊಂದಲು ಮತ್ತು ಬದುಕಲು ಅನುವು ಮಾಡಿಕೊಡುತ್ತದೆ.

## ನೀವೂ ಬರೆಯಬಹುದು

ಹಂಪಿ **ಟೈಮ್ಸ್** ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**


**ತಾಯಿ ತನ್ನ ಮಗು ಲಕ್ಷ್ಮೀಧರಾಮಾತ್ಯನಿಗೆ ಹಾಲುಣಿಸುವ ಸಂದರ್ಭದಲ್ಲಿ ಕಿವಿಯಲ್ಲಿ ಹೇಳಿದ್ದ ಆ ಮಾತುಗಳು, ಆ ವ್ಯಕ್ತಿ ಮಂತ್ರಿಯಾದಾಗ ಮಾಡಿದ ಕಾರ್ಯಗಳು ಮಾದರಿಯಾಗಿವೆ. ವಿಜಯನಗರ ಸಾಮ್ರಾಜ್ಯದಲ್ಲಿ ಅನೇಕ ಮಹತ್ಕಾರ್ಯಗಳ ನಡೆಯಲು ಹಿರಿಯರ, ತಾಯಂದಿರ ಉದಾತ್ತ ಆದರ್ಶಗಳೇ ಕಾರಣ. ರೈತರ ಗದ್ದೆಗಳಿಗೆ ನೀರನ್ನು ಒದಗಿಸುವ ಜೀವನಾಡಿಗಳಾಗಿರುವ ವಿಜಯನಗರ ಕಾಲವೆ, ಕೆರೆಕಟ್ಟೆಗಳ ನಿರ್ಮಾಣ ಮಾಡಿಸುವಲ್ಲಿ ಆ ತಾಯಿಯ ಕಾಳಜಿ ಎಂತ್ತದ್ದು....?**

## ಉದಾತ್ತ ಸಂಸ್ಕೃತಿಯ ಶಾಸನವೆಂದೆ ಪ್ರಸಿದ್ಧಿಯಾದ

# ಹಂಪಿಯ ಲಕ್ಷ್ಮೀಧರಾಮಾತ್ಯನ ಶಾಸನ

ಕೆರೆಯನ್ನು ಕಟ್ಟಿಸು, ಬಾವಿಯನ್ನು ತೋಡಿಸು, ದೇವಾಲಯಗಳನ್ನು ನಿರ್ಮಿಸು, ಬಂಧನಕ್ಕೆ ಸಿಕ್ಕ ಅನಾಥರನ್ನು ಬಿಡಿಸು, ಸ್ನೇಹಿತರಿಗೆ ಸಹಾಯಕನಾಗು, ನಂಬಿದವರಿಗೆ ಆಶ್ರಯ ದಾತನಾಗು, ಸತ್ಪುರುಷರನ್ನು ರಕ್ಷಿಸು......"

ಇದು ವಿಜಯನಗರ ಸಾಮ್ರಾಜ್ಯದ ಪ್ರೌಢ ಪ್ರತಾಪ ದೇವರಾಯನ ಕಾಲದಲ್ಲಿ ಹಂಪಿಯಲ್ಲಿ ರಚಿತವಾಗಿರುವ ಒಂದು ಶಾಸನ .ಈ ಶಾಸನದ ನೀತಿ ಕನ್ನಡ ನಾಡಿನ ಸಂಸ್ಕೃತಿಯನ್ನು ಬಿಂಬಿಸುತ್ತದೆ ಹಾಗೂ ಇದು ಸಾಮಾಜಿಕವಾಗಿ ಉದಾತ್ತವಾದ ಆಶಯವನ್ನು ಹೊಂದಿರುವ ಶಾಸನ ವೆಂದು ನಾಡಿನಲ್ಲಿ ಪ್ರಸಿದ್ಧಿ ಪಡೆದಿದೆ.ಈ ಶಾಸನ ಕುರಿತು ಒಂದಿಷ್ಟು ಮಾಹಿತಿ.





ನಮ್ಮ ಗತಕಾಲದ ಚರಿತ್ರೆಯನ್ನು ಕಟ್ಟಿಕೊಡಲು, ವಿಶ್ಲೇಷಿಸಲು, ಶಾಸನಗಳು ಬಹಳ ಮಹತ್ವದ ಪಾತ್ರವನ್ನು ವಹಿಸಿವೆ. ನಮ್ಮ ರಾಜ ಮಹಾರಾಜರ ಸಾಮ್ರಾಜ್ಯಗಳ ರಾಜಕೀಯ ಸಾಮಾಜಿಕ ಸಾಂಸ್ಕೃತಿಕ ಪರಂಪರೆಯನ್ನು ಅರಿಯಲು ಹಲವಾರು ಆಕರಗಳಲ್ಲಿ ಶಾಸನಗಳು ಅತಿ ಪ್ರಮುಖವಾದ ಆಧಾರಗಳಾಗಿವೆ. ನಮ್ಮ ದೇಶದಲ್ಲಿ ಶಾಸನಗಳ ಚರಿತ್ರೆ ಪ್ರಾರಂಭವಾಗುವುದು ಪ್ರಾಯಶಃ ಅಶೋಕನ ಕಾಲದಿಂದ ಎನ್ನಲಾಗಿದೆ. ಅಶೋಕ ದೊಡ್ಡ ದೊಡ್ಡ ಬಂಡೆಗಳ ಮೇಲೆ ಬೌದ್ಧ ಧರ್ಮ ಕುರಿತು ಶಾಸನಗಳನ್ನು ಬರೆಯಿಸಿದ್ದಾನೆ .ಈ ಶಾಸನಗಳು ಕರ್ನಾಟಕದಲ್ಲಿ ವಿಶೇಷವಾಗಿ ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಕಂಡುಬಂದಿವೆ. ಶಾಸನಗಳ ಚರಿತ್ರೆ ಪ್ರಾರಂಭವಾಗುವುದೆ ಅಶೋಕನ ಶಾಸನಗಳಿಂದ ಎಂಬ ಮಾತಿದೆ. ಅಶೋಕನ ನಂತರದ ಶಾಸನಗಳೆಂದರೆ ಶಾತವಾಹನರು ಮತ್ತು ಕದಂಬರ ಕಾಲದ ಶಾಸನಗಳು ಅಂದರೆ ಮೂರು ಅಥವಾ ನಾಲ್ಕನೇ ಶತಮಾನವುಗಳು. ಅಲ್ಲಿಂದ ವಿಜಯನಗರದ ವರೆಗೆ ಶಾಸನಗಳು ಸಾವಿರಾರು ಸಂಖ್ಯೆಯಲ್ಲಿ ದೊರೆತಿವೆ.

ನಮ್ಮ ಕರ್ನಾಟಕದಲ್ಲಿ ಮೊದಲ ಬಾರಿಗೆ ಶಾಸನಗಳನ್ನ ಅಧ್ಯಯನವನ್ನು ಪ್ರಾರಂಭಿಸಿದವರು ಬಿ.ಎಲ್ ರೈಸ್. ಇವರು ಮೊದಲ ಭಾರಿಗೆ ಶಾಸನಗಳನ್ನು ಗುರಿತಿಸಿ ಪ್ರಕಟಿಸುವ ಕಾರ್ಯವನ್ನು ಮಾಡಿದವರು.ನಂತರ ಕನ್ನಡಿಗರಾದ ಆರ್ ನರಸಿಂಹಾಚಾರ್ ಎಚ್ ಕೃಷ್ಣಶಾಸ್ತ್ರಿ ಎಂ ಎಚ್ ಕೃಷ್ಣ ಮೊದಲಾದ ಅನೇಕ ವಿದ್ವಾಂಸರು ಪ್ರಾರಂಭದಲ್ಲಿ ಅತ್ಯಂತ ಶ್ರಮವಹಿಸಿ ಶಾಸನ ಸಂಪತ್ತನ್ನು ಗುರುತಿಸಿ ಸಂಗ್ರಹಿಸಿ ಪ್ರಕಟಿಸುವ ಕಾರ್ಯದಲ್ಲಿ ತೊಡಗಿ ಕೊಂಡರು. ನಂತರ ಡಾ ದೇವರಕೊಂಡಾರಡ್ಡಿ,ಡಾ .ಡಿ.ವಿ.ಪರಮಶಿವಮೂರ್ತಿ ಅಲ್ಲಿಂದ ಇಲ್ಲಿಯತನಕ ನಾಡಿನ ಅನೇಕ ಹಿರಿಯ ಕಿರಿಯ ವಿದ್ವಾಂಸರು ಶಾಸನ ತಜ್ಞರು ಶಾಸನಗಳನ್ನ ಗುರುತಿಸುತ್ತಾ ಅವುಗಳನ್ನು ಪ್ರಕಟಿಸುತ್ತಾ ಬಂದಿದ್ದಾರೆ. ಈಗಲೂ ಸಹ ಇನ್ನೂ ಪ್ರಕಟವಾಗದ ಆ ಪ್ರಕಟಿತ ಶಾಸನಗಳನ್ನ ಗುರುತಿಸಿ ಈಗಲೂ ಪ್ರಕಟಿಸುವ ಕಾರ್ಯ ನಿರಂತರವಾಗಿ ನಡೆದುಕೊಂಡು ಬಂದಿದೆ. ತಮಿಳುನಾಡಿನಲ್ಲಿ ಸಿಕ್ಕಿರುವ ಶಾಸನಗಳನ್ನು ಬಿಟ್ಟರೆ ಕರ್ನಾಟಕದಲ್ಲೇ ಅತಿ ಹೆಚ್ಚು ಶಾಸನಗಳು ದೊರೆತಿವೆ ಎನ್ನಲಾಗಿದೆ. ವಿದ್ವಾಂಸರು ಈ ಶಾಸನಗಳನ್ನ ಹಲವಾರು ಸಂಪುಟಗಳಲ್ಲಿ ಸರಕಾರ, ಸಂಘ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಪ್ರಕಟಿಸುತ್ತಾ ಬಂದಿವೆ. ಹಾಗೆ ಕೆಲವರು ವೈಯಕ್ತಿಕ ನೆಲೆಯಲ್ಲಿಯೂ ಪ್ರಕಟಿಸುತ್ತಾ ಬಂದಿದ್ದಾರೆ .ಶಾಸನಗಳನ್ನು ದೇವಸ್ಥಾನದ ದತ್ತಿ



**ಎಂ.ಎಂ.ಶಿವಪ್ರಕಾಶ**
**ಲೇಖಕರು: ಹೊಸಪೇಟೆ**
**ಮೊ:** 9449654489

Hampi Times E-paper
SCAN AND READ

### ಹಂಪಿ ಒಳನೋಟ

ಶಾಸನಗಳು, ವಿದ್ಯಾದಾನದ ಶಾಸನಗಳು,ವೀರಗಲ್ಲು ಮಾಸ್ತಿಗಲ್ಲು, ನಿಷೇಧಿಗಲ್ಲುಗಳು ,ಗುರುಗಳಿಗೆ ಜನರಿಗೆ ಕೊಟ್ಟ ದಾನಶಾಸನಗಳು, ಮೂರ್ತಿಗಳ ಮೇಲಿನ ಶಾಸನಗಳು ಹೀಗೆ ಶಾಸನಗಳನ್ನು ಹಲವಾರು ವಿಧಗಳಲ್ಲಿ ವಿದ್ವಾಂಸರು ವಿಭಾಗಿಸಿ ಅಧ್ಯಯನ ಮಾಡುತ್ತಾ ಬಂದಿದ್ದಾರೆ.ಹಂಪಿಯ ಪ್ರದೇಶಕ್ಕೆ ಸೀಮಿತಗೊಳಿಸಿ ಶಾಸನಗಳನ್ನು ನೋಡುವುದಾದರೆ ಹಂಪಿಯಲ್ಲೇ ಸುಮಾರು 500ಕ್ಕೂ ಹೆಚ್ಚು ಶಾಸನಗಳನ್ನು ಗುರುತಿಸಿ ಪ್ರಕಟಿಸಲಾಗಿದೆ. ಇನ್ನು ಅನೇಕ ಶಾಸನಗಳನ್ನು ಗುರುತಿಸಬಹುದಾಗಿದೆ.ಆ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ವಿಜಯನಗರದ ಇಮ್ಮಡಿ ಹರಿಹರ, ಪ್ರೌಢದೇವರಾಯ ಹಾಗೂ ಕೃಷ್ಣದೇವರಾಯನ ಕಾಲದ ಬಹಳಷ್ಟು ಶಾಸನಗಳನ್ನು ಗುರುತಿಸಿ ಪ್ರಕಟಿಸಲಾಗಿದೆ.ಅನೇಕ ಶಾಸನಗಳು ದೊರೆತಿವೆ. ಇಮ್ಮಡಿ ಹರಿಹರನ ಕಾಲದ ಕನ್ನಡ ತೆಲುಗು ತಮಿಳು ಸುಮಾರು 750ಕ್ಕ ಹೆಚ್ಚು ಶಾಸನಗಳನ್ನು ಕರ್ನಾಟಕ ಆಂಧ್ರ ಮತ್ತು ತಮಿಳುನಾಡು ರಾಜ್ಯಗಳಲ್ಲಿ ವಿಶೇಷವಾಗಿ ಗುರುತಿಸಲಾಗಿದೆ. ಪ್ರೌಢದೇವರಾಯನ ಕಾಲದ ಸುಮಾರು 275 ಶಾಸನಗಳನ್ನು ಡಾ.ಡಿ.ವಿಪರಮಶಿವಮೂರ್ತಿಯವರು ಮೊದಲ ಬಾರಿಗೆ ಗುರುತಿಸಿ ಪ್ರಕಟಿಸಿದ್ದಾರೆ.

ಹಂಪಿಯ ಹಾಗೂ ರಾಜ್ಯದ ಶಾಸನಗಳಲ್ಲಿವಿಶೇಷವಾಗಿರುವುದು ಹಂಪಿಯ ಲಕ್ಷ್ಮೀದರಮಾತ್ಯನ ಶಾಸನ. ಈ ಶಾಸನವು ಸಾಮಾಜಿಕ ಕಳಕಳಿಯ ಉದಾತ್ತ ಧ್ಯೇಯವನ್ನುಹೊಂದಿದ್ದು ಇದು ರಾಜ್ಯದಲ್ಲಿ ವಿಶಿಷ್ಟವಾಗಿ ಗಮನಸೆಳೆದಿದೆ.

ವಿಜಯನಗರ ಸಾಮ್ರಾಜ್ಯದ ಪ್ರೌಢ ಪ್ರತಾಪ ದೇವರಾಯನ ಕಾಲದಲ್ಲಿ(1411) ಮಂತ್ರಿಯಾಗಿದ್ದವನು ಲಕ್ಷ್ಮೀಧರಾಮಾತ್ಯ. ಈತ ಮಾಲ್ಯವಂತಪರ್ವತದ ತೆಂಕಣ ಪಕ್ಕದಲ್ಲಿದ್ದ ಮಹಾ ಗುಹೆಯಲ್ಲಿ ಮಹಾಗಣಪತಿಯನ್ನು ಸ್ಥಾಪಿಸಿ ಅದಕ್ಕೆ ದತ್ತಿಗಳನ್ನು ಬಿಟ್ಟಿರುವ ಸಂಗತಿ ಇಲ್ಲಿರುವ ಒಂದು ಶಾಸನದಲ್ಲಿದೆ. ಕವಿರಾಜನೆಂದು ಹೊಗಳಲ್ಪಟ್ಟವ.

ಇವನು ಮಗುವಿದ್ದಾಗ ಇವನ ತಾಯಿ ಇವನಿಗೆ ಹಾಲನ್ನು ಕುಡಿಸುತ್ತಾ ಕಿವಿಯಲ್ಲಿ ದಿನವೂ ಪದ್ಯವನ್ನು ಹೇಳುತ್ತಿದ್ದಾಳು ಎನ್ನುವುದು ಈ ಶಾಸನ ದಿಂದ ತಿಳಿದು ಬರುತ್ತದೆ. ಶಾಸನದ ಸಾರದ ಒಂದು ಭಾಗ ಈ ರೀತಿ ಇದೆ ಕೆರೆಯನ್ನು ಕಟ್ಟಿಸು,ಬಾವಿಯನ್ನು ತೋಡಿಸು, ದೇವಾಲಯಗಳನ್ನು ನಿರ್ಮಿಸು, ಬಂಧನಕ್ಕೆ ಸಿಕ್ಕ ಅನಾಥರನ್ನು ಬಿಡಿಸು, ಸ್ನೇಹಿತರಿಗೆ ಸಹಾಯಕನಾಗು, ನಂಬಿದವರಿಗೆ ಆಶ್ರಯದಾತನಾಗು, ಸತ್ಪುರುಷರನ್ನು ರಕ್ಷಿಸು ಎಂದು ಮುಂತಾಗಿ ಅವನ ತಾಯಿ ಅವನ ಕಿವಿಯಲ್ಲಿ ಹೇಳುತ್ತಾ ಹಾಲನ್ನು ಕುಡಿಸುತ್ತಿದ್ದಳಂತೆ.

ಮುಂದೆ ಲಕ್ಷ್ಮೀಧರನು ಮಂತ್ರಿ ಆದಾಗ ತನ್ನ ಎಲ್ಲಾ ಸತ್ಕಾರಗಳನ್ನು ಮಾಡಲು ತಾನು ಮಗುವಿದ್ದಾಗ ತನ್ನ ತಾಯಿ ಕಿವಿಯಲ್ಲಿ ಹೇಳಿದ ಮಾತುಗಳೇ ಕಾರಣವೆಂದು ಹೇಳುತ್ತಾನೆ.ಈ ಸದಾಶಿಯದ ಕಲ್ಪನೆಯನ್ನು ಶಾಸನದ ಕವಿ ನಿರೂಪಿಸಿದ್ದಾನೆ ಎನ್ನಲಾಗಿದೆ . ಇಂತಹ ಉದಾತ್ತ ಕಲ್ಪನೆ ನಮ್ಮ ನಾಡಿನ ಸಂಸ್ಕೃತಿಯನ್ನು ಎತ್ತಿ ಹಿಡಿಯುತ್ತದೆ .ಸಾಮಾಜಿಕ ಜೀವನದ ನೆಮ್ಮದಿಗೆ ಅವಶ್ಯವಾದ ಮೂಲಭೂತಗಳನ್ನು ಶಾಸನದ ಪದ್ಯ ಸೂಚಿಸುತ್ತದೆ .ಹಸಿದು ಬಂದವರಿಗೆ ಅನ್ನದಾನ ಮಾಡು,ಸಂಕಷ್ಟದಲ್ಲಿ ಸಿಕ್ಕಿದವರಿಗೆ ಅಭಯದಾನ ಮಾಡಿ, ಸಂಕಷ್ಟ ದಿಂದ ಪಾರು ಮಾಡುವುದು, ಸ್ನೇಹಿತರಿಗೆ ಸಹಾಯ ಮಾಡು, ಸಮಾಜದಲ್ಲಿನ ತತ್ಪುರುಷರನ್ನು ರಕ್ಷಿಸುವುದು ಮೊದಲಾದವುಗಳನ್ನು ಮಾಡುವಂತೆ ಈ ಶಾಸನ ಸೂಚಿಸುತ್ತದೆ.ಇದು ನಾಗರೀಕ ಸಮಾಜದಹಾಗೂಸುಸಂಸ್ಕೃತ ಸಮಾಜದಲಕ್ಷಣನುವೆನಿಸಿಕೊಳ್ಳುತ್ತದೆ .ಇಂತಹ ಸಂಸ್ಕೃತಿ ಕನ್ನಡ ನಾಡಿನದ್ದು ಎಂಬುದನ್ನು ಈ ಶಾಸನ ತೋರಿಸಿಕೊಟ್ಟಿದೆ. ಅಷ್ಟೇ ಅಲ್ಲ ವಿಜಯನಗರ ಸಾಮ್ರಾಜ್ಯದಲ್ಲಿ ಅನೇಕ ಮಹತ್ಕಾರ್ಯಗಳು ನಡೆಯಲು ಇಂತಹ ಉದಾತ್ತ ಆದರ್ಶಗಳೇ ಕಾರಣವಾಗಿವೆ, ಅದರಲ್ಲೂ ವಿಜಯನಗರದಲ್ಲಿ ಕೆರೆಕಟ್ಟೆ ಕಾಲುವೆ ಅಣೆಕಟ್ಟುಗಳನ್ನು ನಿರ್ಮಿಸುವಲ್ಲಿ ಈ ಉದಾತ್ತವಾದ ಚಿಂತನೆ ಕಾರಣವಾಗಿದೆ ಎಂದರೆ ಅತಿಶೋಕ್ತಿಯಲ್ಲ.

ವಿಜಯನಗರದಲ್ಲಿ ನಿರ್ಮಾಣಗೊಂಡಷ್ಟು ಕೆರೆ ಕಾಲುವೆಗಳು ಇನ್ಯಾವ ಕಾಲದಲ್ಲೂ ನಿರ್ಮಾಣಗೊಂಡಿಲ್ಲ ಇವತ್ತಿಗೂ ವಿಜಯನಗರ ಬಳ್ಳಾರಿ ಕೊಪ್ಪಳ ರಾಯಚೂರು ಜಿಲ್ಲೆಗಳಲ್ಲಿ ಈ ಕಾಲುವೆಗಳು ರೈತರ ಗದ್ದೆಗಳಿಗೆ ನೀರನ್ನು ಒದಗಿಸುತ್ತ ಜೀವಂತ ಕೆರೆಕಟ್ಟೆ, ಕಾಲುವೆಗಳಾಗಿಯೇ ಉಳಿದಿವೆ ಎಂದರೆ ಆಶ್ಚರ್ಯ ಮತ್ತು ಹೆಮ್ಮೆಪಡುವಂತಹ ಕಾರ್ಯವಾಗಿದೆ. ಕೆರೆಯನ್ನು ಕಟ್ಟಿಸು ಬಾವಿಯನ್ನು ತೋಡಿಸು , ಜನರಿಗೆ ಅವಶ್ಯವಾದ ನೀರಿನ ಸೌಲಭ್ಯವನ್ನು ಒದಗಿಸುವಂತಹ ಈ ಧ್ಯೇಯ ವಾಕ್ಯ ವಿಜಯನಗರ ಕಾಲದಲ್ಲಿ ಅಕ್ಷರ ಸಹ ಪಾಲಿಸಿದ್ದಾರೆ ಹಾಗೂ ಹಂಪಿಯ ಶಾಸನಗಳಲ್ಲಿ ನೀರಾವರಿಗೆ ಸಂಬಂಧಿಸಿದ ಅನೇಕ ವಿಷಯಗಳು ದೊರೆಯುತ್ತವೆ .ಒಂದನೇ ಹರಿಹರ ಮತ್ತು ಅವನ ತಮ್ಮ ಬುಕ್ಕರಾಯನು ಸೇರಿ ತುಂಗಾಭದ್ರ ನದಿಗೆ ಆಣೆಕಟ್ಟನ್ನು ಕಟ್ಟಿಸಿ ಅದರಿಂದ ರೈತರ ವ್ಯವಸಾಯಕ್ಕೆ ಅನುವು ಮಾಡಿಕೊಟ್ಟದ್ದು ಚರಿತ್ರೆಯಲ್ಲಿ ಕಂಡುಬರುತ್ತದೆ. ಹಾಗೇನೆ ತುರ್ತು ಕಾಲುವೆಯನ್ನು ನಿರ್ಮಿಸಿದ್ದು ನೀರಾವರಿಯ ವ್ಯವಸ್ಥೆಗೆ ಕೈಗನ್ನಡಿಯಾಗಿದೆ. ಇಂದಿಗೂ ಸಾವಿರಾರು ಎಕರೆ ಭೂಮಿಗೆ ವಿಜಯನಗರದ ಕಾಲುವೆಗಳ ನೀರಾವರಿ ಸೌಲಭ್ಯ ದೊರೆಯುತ್ತಿದೆ ಇದು ವಿಜಯನಗರ ಸಾಮ್ರಾಜ್ಯದ ಅವರ ಅಂದಿನ ಜಲ ತಂತ್ರಜ್ಞಾನಕ್ಕೆ ಇವತ್ತಿಗೂ ಸಾಕ್ಷಿಯಾಗಿ ರೈತರ ಜೀವನದ ಆಧಾರದ ಕಾಲುವೆಗಳಾಗಿವೆ. ಸುಮಾರು 18ಕ್ಕೂ ಹೆಚ್ಚು ಕಾಲುವೆಗಳಿದ್ದು ಇವುಗಳಲ್ಲಿ ರಾಯ ಕಾಲುವೆ ಬಹು ಮುಖ್ಯವಾದ ಕಾಲುವೆಯಾಗಿದೆ ಇಂದಿಗೂ ಇದು ಹೊಸಪೇಟೆ ತಾಲೂಕಿನ ಹಲವಾರು ಹಳ್ಳಿಗಳು ಈ ಕಾಲುವೆಯ ನೀರು ಪಡೆದು ಸುಮಾರು 2300 ಹೆಕ್ಟರ್ ಭೂಮಿ ನೀರಾವರಿಗೆ ಒಳಪಟ್ಟಿದೆ.

ಹಂಪಿಯ ಲಕ್ಷ್ಮೀಧಾರತನ ಶಾಸನವಷ್ಟೇ ನಾಡಿಗೆ ಆದರ್ಶವಲ್ಲ ಹಂಪಿಯ ನೆಲದ ಧಾರ್ಮಿಕ ಪೌರಾಣಿಕ ಚಾರಿತ್ರಿಕ ಸಾಂಸ್ಕೃತಿಕ ಸಾಹಿತ್ಯ ಕಲೆ ಸಂಗೀತ ಹೀಗೆ ಎಲ್ಲವೂ ನಾಡಿಗೆ ಆದರ್ಶವಾಗಿದೆ. ಇಲ್ಲಿಯ ಚರಿತ್ರೆ ಸಾಹಿತ್ಯ ಸಂಸ್ಕೃತಿ ಸಂಗೀತ ಕಲೆ ವಿಶ್ವದ ಗಮನವನ್ನೇ ಸೆಳೆದಿದೆ. ಹಿಂದಿನ ಹಂಪಿಯ ಪ್ರದೇಶದಲ್ಲಿ ಸುಮಾರು 500 ಶಾಸನಗಳು ದೊರೆತಿರುವುದು ಈ ನೆಲದ ಸಂಸ್ಕೃತಿಯ ಕೊಡುಗೆಯಾಗಿದೆ.

# ಬಣ್ಣದ ದೋಣಿ

ಅದೊಂದು ದಿನ ಬೆಳ್ಳಂಬೆಳಗ್ಗೆನೆ ದೋ..... ಎಂದು ಮಳೆ ಸುರಿಯುತ್ತಿತ್ತು, ಹೇಳಿ ಕೇಳಿ ಮಲೆನಾಡಿನ ದಟ್ಟ ಕಾನನದ ಪರ್ವತದ ಇಳಿಜಾರಿನಲ್ಲಿದ್ದ ಊರು ಅದು ಹೆಸರು ಹೊನಲು ಗದ್ದೆ, ಈ ತರಹದ ಮಳೆಯ ಅರ್ಭಟ ಆ ಊರ ಜನಕ್ಕೆ ಹೊಸತೇನಲ್ಲ, ಆದರೂ ಆ ದಿವಸ ದೋ.... ಎಂದು ಬೆಳಗ್ಗೆನೆ ಸುರಿಯುತ್ತಿದ್ದರಿಂದ ಎಂದಿನಂತೆ ಅಡಿಕೆ ತೋಟದ ಬದಿಗೆ ಹೋಗಿಬರಲಿಕ್ಕೆ ಶಂಕರ ಭಟ್ರು ಪದೇ ಪದೇ ತಲೆಮೇಲೆ ಕೈಹೊತ್ತು ಮುಗಿಲನ್ನು ನೋಡುತ್ತಿದ್ದರು.

ಇನ್ನೂ ಮಳೆ ಜೋರಾಯ್ತು ಅಂದರೆ ಸಾಕು ಆ ದಿವಸ ಶಾಲೆಗೆ ರಜೆನೇ, ಅಕ್ಕ ಪಕ್ಕದ ಮನೆಯ ಮಕ್ಕಳೆಲ್ಲ ಅಂಗಳದಲ್ಲಿ ಜೋರಾಗಿ ಕೇಕೆ ಹಾಕುತ್ತ ಗುಂಪು ಗುಂಪಾಗಿ ಆ ಹರಿಯುತ್ತಿದ್ದ ನೀರಿನಲ್ಲಿ ಏನೋ ಮಾಡುತ್ತಿದ್ದನ್ನು ಭಟ್ರ ಮಾಣಿ ಸುಬ್ಬು ಕಿಟಕಿಯಿಂದ ನೋಡುತ್ತಿದ್ದ.



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Hampi Times E-paper
SCAN AND READ

ಸುಬ್ರಾಯನಿಗೂ ಆ ಮಕ್ಕಳ ಜೊತೆಯಲ್ಲಿ ಚಿಟಪಟ ಮಳೆಯ ಹನಿಗಳಲ್ಲಿ ತಿಳಿಯಾದ ಕೆಸರಿನಲ್ಲಿ ಆಡಬೇಕೆನ್ನುವ ಆಸೆ ಇದ್ದರೂ ಶಂಕರ ಭಟ್ರು ಭಯಕ್ಕೆ ಕಿಟಕಿಯಲ್ಲೇ ಪಿಳಿ ಪಿಳಿ ಕಣ್ಣು ಬಿಡುತ್ತ ಕುಳಿತಿದ್ದ.

ಮಳೆ ಸ್ವಲ್ಪ ಸುಧಾರಿಸಿ ಕೊಂಡಂತೆ ಕಡಿಮೆಯಾಗಿದ್ದೆ ತಕ್ಷಣ "ನಾ ತೋಟದ ಬದಿ ಹೋಗಿ ಬರುತ್ತೆ" ಎನ್ನುತ್ತಾ ಭಟ್ರು ಹೊರಡುವುದಕ್ಕೋ, ಇದನ್ನೆ ಕಾಯುತ್ತ ಕುಳಿತಿದ್ದ ಸುಬ್ರಾಯು ಒಂದೇ ನೆಗತಕ್ಕೆ ಅಂಗಳಕ್ಕೆ ಹಾರಿದವನೆ ಅಲ್ಲಿ ಸುತ್ತುವರಿದು ಕುಳಿತಿದ್ದ ತನ್ನೆಲ್ಲ ಸ್ನೇಹಿತರನ್ನು ಕುತೂಹಲದಿಂದ ನೋಡಿದಾಗಲೆ ಗೊತ್ತಾಗಿದ್ದು ಅವರು ಹರಿಯುತ್ತಿದ್ದ ನೀರಿನಲ್ಲಿ ತೇಲಿ ಬೀಡಲು ಕಾಗದದ ದೋಣಿಯನ್ನು ಮಾಡಿ ಒಂದೊಂದಾಗಿ ಬಿಡುತ್ತಿದ್ದರು. ಸುಬ್ರಾಯಿನಿಗೂ ತಾನೂ ಕಾಗದದ ದೋಣಿ ಮಾಡಿ ನೀರಿನಲ್ಲಿ ಬಿಡಬೇಕು ಎಂದುಕೊಂಡು ತನ್ನನ್ನೂ ನಿಮ್ಮ ಜೊತೆ ಆಟಕ್ಕೆ ಸೇರಿಸಿಕೊಳ್ಳಿ ಎಂದು ಕೇಳಿದ. ತಕ್ಷಣ ಆ ಹುಡುಗರೆಲ್ಲ ಸೇರಿ ಸುಬ್ರಾಯಿನಿಗೆ ಅಪಹಾಸ್ಯ ಮಾಡುತ್ತಾ ಇದು ನಿನ್ನಿಂದಾಗದು ನಡೆ ನಡೆ ನೀನೇದ್ದರೂ ಅಡುಗೆ ಮನೆಯಲ್ಲಿ ಅಮ್ಮನಿಗೆ ಸಹಾಯ ಮಾಡು ಎಂದು ಅವನಿಗೆ ಗೇಲಿ ಮಾಡಿ ಅವನನ್ನು ಆಟದಿಂದ ದೋರ ತಳ್ಳಿದರು.

ಕೆಸರಿನಲ್ಲಿ ಬಿದ್ದ ಅಳುತ್ತಿದ್ದ ಸುಬ್ರಾತನನ್ನು ನೋಡಿದ ಅವನ ಅಮ್ಮ ಸೀತಕ್ಕ ಓಡಿ ಬಂದು ಏನಾಯಿತು? ಕಾಲು ಜಾರಿ ಬಿದ್ದಿಯಾ? ಎನ್ನುತ್ತಿದ್ದಂತೆ ಅಳುತ್ತಿದ್ದ ಸುಬ್ರಾಯು ನೆಡೆದ ಘಟನೆಯನ್ನು ಅಮ್ಮನಿಗೆ ಹೇಳುತ್ತಾ ತನಗೂ ಕಾಗದದ ದೋಣಿ ಮಾಡಲು ಬರುತ್ತದೆ ಆದರೂ ಇವರೆಲ್ಲ ನನಗೆ ದೋಣಿ ಮಾಡಲು ಬರುವುದಿಲ್ಲ ಮತ್ತು ನಾನು ಮಾಡಿದ ದೋಣಿ ನೀರಿನಲ್ಲಿ ತೇಲುವುದಿಲ್ಲ ಎಂದು ಅಪಹಾಸ್ಯ ಮಾಡಿ ಹಂಗಿಸುತ್ತಿದ್ದಾರೆ ಜೊತೆಗೆ ದೋಣಿ ಆಟಕ್ಕೆ ನನ್ನನ್ನು ಸೇರಿಸಿಕೊಳ್ಳುತ್ತಿಲ್ಲ ನೋಡಮ್ಮ ಎಂದನು.

ಮಗನ ಆಸೆಯನ್ನು ಕಂಡು ಅವನಿಗೆ ಸಮಾದಾನ ಪಡಿಸುತ್ತ ನೊಂದುಕೊಳ್ಳಬೇಡ ನಿನ್ನೊಂದಿಗೆ ನಾನು ಆಡುತ್ತೇನೆ ಹಾಗೆಯೆ ನಿನ್ನ ಸ್ನೇಹಿತರಲ್ಲಿ ಇರದಂತಹ ಮತ್ತು ಅತ್ಯಂತಹ ಸುಂದರವಾದ ಗಟ್ಟಿಯಾದ ದೋಣಿಯನ್ನು ಮಾಡಿಕೊಡುತ್ತೇನೆ ಎಂದು ಹೇಳಿ ಮನೆಯ ಒಳಗೆ ಹೋದವಳೆ ಎರಡು ದಪ್ಪನೆಯ ಬಣ್ಣದ ಕಾಗದವನ್ನು ತಂದಳು, ಆ ಕಾಗದದಿಂದ ಸುಬ್ರಾಯಿನಿಗೊಂದು ತನಗೊಂದು ಬಣ್ಣ



ಬಣ್ಣದ ಸುಂದರವಾದ ಬಣ್ಣದ ದೋಣಿಗಳನ್ನು ಮಾಡಿದಳು, ದೋಣಿಗಳು ಸಿದ್ದವಾಗುತ್ತಿದ್ದಂತೆ ಸುಬ್ರಾಯಿನ ಕಣ್ಣುಗಳಲ್ಲಿನ ಹೊಳಪು ಇಮ್ಮಡಿಯಾಯಿತು ಅವನ ಸಂತೋಷಕ್ಕೆ ಪಾರವೆ ಇಲ್ಲದಾಯಿತು, ಖುಷಿಯಿಂದ ಸುಬ್ರಾಯಿ ಕೂಗುತ್ತಾ "ನನ್ನ ದೋಣಿ ಬಣ್ಣದ ದೋಣಿ" ಅಮ್ಮನ ಮಾಡಿದ ಬಣ್ಣದ ದೋಣಿ ಎಂದು ಮಳೆಯಲ್ಲಿ ಕುಣಿದು ಕುಪ್ಪಳಿಸಿದನು. ನೀರಿನಲ್ಲಿ ತೇಲಿಬಿಟ್ಟು ಹರ್ಷಪಟ್ಟನು.

ಉಳಿದ ಎಲ್ಲಾ ಸ್ನೇಹಿತರೂ ಸುಬ್ಬುವಿನ ಬಣ್ಣದ ದೋಣಿಯನ್ನು ಕಂಡು ಚಕಿತರಾದರಲ್ಲದೆ ನಮಗೂ ನಿನ್ನ ರೀತಿಯ ಬಣ್ಣ ಬಣ್ಣದ ದೋಣಿಯನ್ನು ಮಾಡಲು ಕಲಿಸಿಕೊಡು ಎಂದು ದುಂಬಾಲು ಬಿದ್ದರು. ಸುಬ್ರಾಯನೊಂದಿಗೆ ಕುಣಿದಾಡಿದರು ಸೀತಮ್ಮನ ಕೈಚಳಕ್ಕಕ್ಕೆ ಬೆರಗಾದ ಮಕ್ಕಳು ಅಮ್ಮಂದಿರ ಕೆಲಸ ಕೇವಲ ಅಡುಗೆ ಮಾಡುವುದಷ್ಟೇ ಅಲ್ಲ ಅಮ್ಮಂದಿರಿಗೂ ಎಲ್ಲವು ಬರುತ್ತದೆ ಎಂದು ಅಮ್ಮನ ಬಗ್ಗೆ ಹೆಮ್ಮೆ ಪಟ್ಟರು. ಸುಬ್ಬುವುನೊಂದಿಗೆ ಕುಣಿದಾಡಿದರು. ಮಗನ ಖುಷಿಯನ್ನು ಕಂಡು ಸೀತಮ್ಮನ ಕಣ್ಣಾಲಿಗಳು ಬಣ್ಣ ಬಣ್ಣದ ನೀರಾದವು, ದೋರದಲ್ಲೆ ನಿಂತು ಇದನ್ನೆಲ್ಲ ಗಮನಿಸುತ್ತಿದ್ದ ಶಂಕರ ಭಟ್ರು ಹೃದಯ ತಂಪಾಯಿತು, ಸುಬ್ರಾಯನ "ಬಣ್ಣದ ದೋಣಿ" ಋತುರಾಜನಂತೆ ತೇಲುತಿತ್ತು.

ಕವಿ ಮನಸು

## ಸುಯೋಗ

ಕಲುಷಿತ ಆಹಾರದಿಂದ ಹೆಚ್ಚಾಗುತ್ತಿದೆ
ಅನಾರೋಗ್ಯ
ಕಾಪಾಡಿಕೊಳ್ಳಬೇಕಾಗಿದೆ ನಮ್ಮ ಆರೋಗ್ಯ
ಆರೋಗ್ಯಕರ ದೇಹಕ್ಕಾಗಿ ಮಾಡಬೇಕು
ಯೋಗ
ನೀಡುವುದು ನವೋಲ್ಲಾಸ ನೆಮ್ಮದಿಯ
ಸುಯೋಗ

ದೇಹ ಬುದ್ಧಿ ಮನಸ್ಸುಗಳ ಸಮನ್ವಯವೇ
ಯೋಗ
ಮಾಡುವುದರಿಂದ ಆಗುವುದು ಅನೇಕ
ಉಪಯೋಗ
ಎಲ್ಲಾರೂ ಒಗ್ಗಟ್ಟಾಗಿ ಮಾಡಿದರೆ ಈ
ಪ್ರಯೋಗ
ತಡೆಗಟ್ಟಬಹುದು ಹಲವಾರು ರೋಗ

ಶರೀರದ ಸದೃಢತೆಗೆ ಯೋಗವೀಗ
ಅನಿವಾರ್ಯ
ಹೆಚ್ಚಿಸುವುದು ಒಳಮನಸ್ಸಿನ ಸೌಂದರ್ಯ
ಇಂದು ಅಂತಾರಾಷ್ಟ್ರೀಯ ಯೋಗದ ಸುದಿನ
ಶುರುಮಾಡೋಣ ವ್ಯಾಯಾಮವ ಪ್ರತಿದಿನ

– ಚೇತನ ಭಾರ್ಗವ ಬೆಂಗಳೂರು

## ಮಕ್ಕಳ ಭಾಗ್ಯ?

ಸಾಕುಸಾಕು ಸಾಕಾಗೈತಿ
ಯಾತಕೆ ಬೇಕು ಸಂಸಾರ,
ಕೆಟ್ಟ ಮೇಲೆ ಬುದ್ಧಿ ಬಂತು
ನಿನ್ನದೆ ತಪ್ಪುಅನುತಾಳ. ||1||

ಒಂದೇ ಎರಡೆ ನಾಲ್ಕೆ ಎಂಟೆ,
ಹನ್ನೆರಡು ಮಕ್ಕಳ ಹಡದೀವಿ
ಎದೆ ಎತ್ತರ ಬೆಳೆದಾವೋ
ಎದಿ ಒಡೆದು ಬಿಟ್ಟವಿ. ||2||

ಮೂರು ಲಗ್ನ ಮಾಡಿನಿ
ನಾಲ್ಕು ಕನ್ಯೆ ತೋರಿಸಿನಿ,
ಹೆಣ್ಣು ಮಕ್ಕಳ ದಂಡು ಬಹಳ
ನಿಮಗೊಂದು ಕನ್ಯ ಕೊಡತಿನಿ. ||3 ||

ಬೆಳ್ಳಿ ಬಂಗಾರ ಕೇಳಬೇಡಿ,
ಹೊಲಮನಿ ಕಾಡ ಬೇಡಿ
ಸುಮ್ಮನೆ ಮದ್ವಿ ಮಾಡಿಕೊಳ್ರಿ
ಪುಣ್ಯ ಬರುತ್ತ ನಿಮಗ. ||4 ||

ಎಲ್ಲರ ಲಗ್ನ ಮಾಡಿನಿ
ಜೈಭೇರಿ ಗಂಟೆ ಭಾರಿಸಿನಿ
ಧೈರ್ಯ ಬೇಕು ಸಾಧಕಗೆ
ದೇವರು ಬರುವನು ಬಾಗಿಲಿಗೆ. ||5||

– ಎಸ್ಎಸ್ ಮುದ್ಲಾಪುರ ಕವಿಗಳು

## ಬದುಕು ರೂಪಿಸಿಕೊಳ್ಳಲು ಕೌಶಲ್ಯ ಅಗತ್ಯ

**ಹಂಪಿ ಟೈಮ್ಸ್ ಕೂಡ್ಲಿಗಿ:**
ಪ್ರತಿಯೊಬ್ಬರೂ ತಮ್ಮಲ್ಲಿರುವ ದೌರ್ಬಲ್ಯಗಳನ್ನು ಗುರುತಿಸಿ ಅದನ್ನು ಸಾಮರ್ಥ್ಯಗಳನ್ನಾಗಿ ಪರಿವರ್ತಿಸಿಕೊಂಡಾಗ ಬದುಕಿನ ಹಾದಿ ಸುಗಮವಾಗುತ್ತದೆ. ಈ ನಿಟ್ಟಿನಲ್ಲಿ ಇಂತಹ ಕೌಶಲ್ಯ ತರಬೇತಿ ಕಾರ್ಯಕ್ರಮಗಳು ಶಾಲೆಗಳಲ್ಲಿ ನಡೆಯಬೇಕಾದ ಅನಿವಾರ್ಯತೆ ಇದೆ ಎಂದು ಸರ್ಕಾರಿ ಸಂಯುಕ್ತ ಪಪೂ ಕಾಲೇಜು ಪ್ರಚಾರ್ಯೆ ಟಿ.ಕೊತ್ಲಮ್ಮ ಹೇಳಿದರು. ಪಟ್ಟಣದ ಸರ್ಕಾರಿ ಸಂಯುಕ್ತ ಪಪೂ ಕಾಲೇಜಿನಲ್ಲಿ ಗುರುವಾರ ರಾಷ್ಟ್ರೀಯ ಸೇವಾ ಯೋಜನೆ ಕೂಡ್ಲಿಗಿ ಘಟಕದಿಂದ ಬೆಂಗಳೂರಿನ ನಿಮ್ಹಾನ್ಸ್ ಹಾಗೂ ಯುವ ಸ್ಪಂದನ ಸಹಯೋಗದಲ್ಲಿ ಪ್ರಥಮ ಹಾಗೂ ದ್ವಿತಿಯ ಪಿಯುಸಿ ವಿಧ್ಯಾರ್ಥಿಗಳಿಗೆ ಒಂದು ದಿನದ ಜೀವನ ಕೌಶಲ್ಯ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಈಗಿನ ಜನರ ಆಧುನಿಕ ಬದುಕು ಯಾಂತ್ರಿಕವಾಗಿದ್ದು ಜೀವನದ ಮೌಲ್ಯಗಳನ್ನು ಕಳೆದುಕೊಂಡಿರುವ ಈ ಸಂದರ್ಭದಲ್ಲಿ ಮನುಷ್ಯ ದೈಹಿಕವಾಗಿ ಬವಣೆ ಪಡುವುದಕ್ಕಿಂತ ಮಾನಸಿಕವಾಗಿ ತೊಂದರೆಗಳನ್ನು ಅನುಭವಿಸುತ್ತಾನೆ. ಈ ನಿಟ್ಟಿನಲ್ಲಿ ತಮ್ಮ ನಕಾರಾತ್ಮಕ ಭಾವನೆಗಳನ್ನು ಹತೋಟಿಯಲ್ಲಿಟ್ಟು ಆರೋಗ್ಯಕರ ಜೀವನ ಕೌಶಲ್ಯಗಳನ್ನು ಅಳವಡಿಸಿ ಹೃದಯ ವೈಶಾಲ್ಯತೆಯಿಂದ ಜೀವಿಸುವುದು ಅತೀ ಅವಶ್ಯವಾಗಿದೆ ಎಂದರು.
ಸಂಪನ್ಮೂಲ ವ್ಯಕ್ತಿ ಡಾ.ಜಗದೀಶ್ ಚಂದ್ರಬೋಸ್ ಮಾತನಾಡಿ, ಸಾಧನೆ ಮಾಡಿದ ಅನೇಕ ಮಹನೀಯರು ಪರೀಕ್ಷೆಗಳಲ್ಲಿ ಫೇಲ್ ಆದವರೆ ಹೆಚ್ಚು, ಆದರೆ ಅವರು ಕೈಚೆಲ್ಲಿ ಕೂಡಲಿಲ್ಲ, ಇರುವ ಅವಕಾಶಗಳನ್ನು ಪಡೆದು ಗುರಿ ಸಾಧನೆ ಮಾಡಿ ಯಶಸ್ವಿಯಾಗಿದ್ದಾರೆ ಎಂದರು.
ಎನ್ಎಸ್ಎಸ್ ಕಾರ್ಯಕ್ರಮಧಿಕಾರಿ ಎನ್. ಸುಮಾ, ಉಪನ್ಯಾಕರಾದ ವೆಂಕಟೇಶ್, ಕೆ.ಎಚ್. ಎಂ.ಕೊಟ್ರಮ್ಮ, ಹೆಗ್ಗಪ್ಪ ಹಳ್ಳಿ, ಶರಣಬಸಯ್ಯ, ಸಕ್ರಪ್ಪ ರೆಡ್ಡಿ, ಕೊಟ್ರೇಶ್, ಆಕಾಶ್, ವಿವೇಕಾನಂದ, ಹೂಲೆಪ್ಪ,ಶಿವಕುಮಾರ್ ಇದ್ದರು.

# ಚಿತ್ತಿದಂತೆ ಬೆಳೆ



ಅದು 20ನೇ ಶತಮಾನದ ಆದಿ ಭಾಗ. ಹೊಲದ ಕೆಲಸ ಪೂರೈಸಿ ಸಾಯಂಕಾಲ ತನ್ನ ಮನೆಗೆ ಹೋಗುತ್ತಿದ್ದ ಸ್ಕಾಟ್ಲ್ಯಾಂಡ್ ನ ರೈತನೋರ್ವನಿಗೆ ಯಾರದ್ದೋ ಆರ್ತನಾದ ಕೇಳಿಸಿತು. ಕೂಡಲೇ ಧ್ವನಿ ಬಂದತ್ತ ಧಾವಿಸಿದ ರೈತನಿಗೆ ಕಾಣಿಸಿದ್ದು ಕೆಸರಿನಲ್ಲಿ ಕೂತು ಹೋಗುತ್ತಿದ್ದ ಬಾಲಕ. ಹಿಂದಿನ ದಿನ ಜೋರು ಮಳೆಯಾಗಿದ್ದರಿಂದ ನೆಲ ಕೆಸರಿನಿಂದ ತುಂಬಿ ಹೋಗಿತ್ತು. ಮೊದಲೇ ಜವಳು ಭೂಮಿ.... ಮಳೆಯಾದ ಮೇಲೆ ಕೇಳಬೇಕೆ?? ಬಾಲಕ ಸಹಾಯಕ್ಕಾಗಿ ಕೂಗುತ್ತಿದ್ದ.
ಕೂಡಲೇ ಎಚ್ಚೆತ್ತ ರೈತ ಅಲ್ಲಿಯೇ ಇದ್ದ ಮರದ ಕೊಲ್ಲಿಯೊಂದನ್ನು ಎಳೆದು ತಂದು ಆ ಹುಡುಗ ನ ಕೈಗೆ ಸಿಗುವಂತೆ ಚಾಚಿದನು. ರೈತ ಚಾಚಿದ ಮರದ ಕೊಲ್ಲಿಯನ್ನು ಆ ಹುಡುಗ ಹಿಡಿದುಕೊಂಡ ನಂತರ ರೈತ ತನ್ನೆಲ್ಲ ಶಕ್ತಿಯನ್ನು ಹಾಕಿ ಆತನನ್ನು ಮೇಲಕ್ಕೆ ಎಳೆದುಕೊಂಡನು. ಕೆಸರಿನ ಹೊಂಡದಿಂದ ರಕ್ಷಿಸಲ್ಪಟ್ಟ ಹುಡುಗ ರೈತನಿಗೆ ಧನ್ಯವಾದಗಳನ್ನು ತಿಳಿಸಿದ.
ರೈತ ನಿನ್ನ ಬಟ್ಟೆಗಳೆಲ್ಲವೂ ಕೊಳೆಯಾಗಿವೆ ಹತ್ತಿರದಲ್ಲಿಯೇ ನನ್ನ ಮನೆ ಇದೆ... ನೀನು ಬಂದು ನನ್ನ ಮನೆಯಲ್ಲಿ ಸ್ನಾನ ಮಾಡಿ ನಿನ್ನ ಬಟ್ಟೆಗಳ ಕೊಳೆಯನ್ನು ತೊಳೆದುಕೊಳ್ಳಬಹುದು ಎಂದು ಆಹ್ವಾನಿಸಿದ. ಅದಕ್ಕೆ ಉತ್ತರವಾಗಿ ಆ ಬಾಲಕ "ಬೇಡ, ಈಗಾಗಲೇ ತುಂಬಾ ಹೊತ್ತಾಗಿದೆ, ನನ್ನ ತಂದೆ ಗಾಬರಿಯಾಗಿ ಕಾಯುತ್ತಿರಬಹುದು ನಾನಿನ್ನು ಬರುತ್ತೇನೆ, ಧನ್ಯವಾದಗಳು" ಎಂದು ನಮಸ್ಕರಿಸಿ ಅಲ್ಲಿಂದ ಹೊರಟು ಹೋದನು.
ಮರುದಿನ ಮುಂಜಾನೆ ರೈತನ ಮನೆಯ ಮುಂದೆ ಒಂದು ದೊಡ್ಡ ಕುದುರೆ ಗಾಡಿಯ ಸಾರೋಟು ಬಂದು ನಿಂತಿತು. ಸಾರೋಟಿನಿಂದ ಕೆಳಗಿಳಿದ ಘನಿಷ್ಠ ವ್ಯಕ್ತಿಯೊಬ್ಬ ರೈತನ ಮನೆಯೊಳಗೆ ಬಂದು ರೈತನನ್ನು ಕಂಡು ನಮಸ್ಕರಿಸಿ " ನಿನ್ನೆ ಕೆಸರಿನ ಹೊಂಡದಿಂದ ನೀವು ರಕ್ಷಿಸಿದ ಬಾಲಕನ ತಂದೆ ನಾನು. ನಿಮ್ಮ ಉಪಕಾರಕ್ಕೆ ನಾನು ಸದಾ ಆಭಾರಿಯಾಗಿರುವೆ. ಹೇಳಿ ನನ್ನ ಮಗನನ್ನು ರಕ್ಷಿಸಿದ್ದಕ್ಕೆ ನಿಮಗೆ ನಾನೇನು ಕೊಡಲಿ" ಎಂದು ಆ ಧನಿಕ ವ್ಯಕ್ತಿ ಕೇಳಿದ. ಕೂಡಲೇ ರೈತ "ಮಾನವೀಯ ಪ್ರಜ್ಞೆಯಿಂದ ನನ್ನ ಕರ್ತವ್ಯವನ್ನು ನಾನು ಮಾಡಿದ್ದೇನೆ, ಇದರಲ್ಲಿ ಯಾವುದೇ ಹೆಚ್ಚುಗಾರಿಕೆ ಇಲ್ಲ. ಹೀಗೆ ಹಣವನ್ನು ನೀಡುವ ಮಾತನಾಡಿ ನನ್ನನ್ನು ಅವಮಾನಿಸಬೇಡಿ" ಎಂದು ಹೇಳಿದನು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Hampi Times E-paper
SCAN AND READ

ಆದರೂ ಶ್ರೀಮಂತ ವ್ಯಕ್ತಿ ರೈತನಿಗೆ ಮತ್ತಷ್ಟು ಒತ್ತಾಯ ಮಾಡಲು ರೈತನು ಸ್ಪಷ್ಟವಾಗಿ ನಿರಾಕರಿಸಿ ಹೊರಟು ಹೋಗುತ್ತಿರುವಾಗ ಅಲ್ಲಿಯೇ ಆಡುತ್ತಿದ್ದ ಚೂಟಿಯಾದ ಬಾಲಕನನ್ನು ನೋಡಿ ಆ ಶ್ರೀಮಂತ ವ್ಯಕ್ತಿಯು "ಇವನು ನಿಮ್ಮ ಮಗನೇ" ಎಂದು ರೈತನನ್ನು ಕೇಳಿದನು. ತನ್ನ ಮಗನ ಹಣೆಯನ್ನು ನೇವರಿಸುತ್ತಾ ಹೌದು ಎಂದು ತುಸು ಹೆಮ್ಮೆಯಿಂದಲೇ ರೈತ ಉತ್ತರಿಸಿದ.
ಆ ಕೂಡಲೇ ಶ್ರೀಮಂತ ಮನುಷ್ಯನು ನಿಮ್ಮ ಮಗನು ತನ್ನ ತಂದೆಯಷ್ಟೇ ಉನ್ನತ ವ್ಯಕ್ತಿತ್ವದವನಾಗುವನು ಎಂಬುದು ನನ್ನ ಅನಿಸಿಕೆ. ನಿಮ್ಮ ಮಗನ ಶೈಕ್ಷಣಿಕ ಜವಾಬ್ದಾರಿ ನನ್ನದು.... ಹೀಗೆ ಮಾಡುವ ಮೂಲಕ ನಿಮ್ಮ ಋಣ ತೀರಿಸಿದ ತೃಪ್ತಿ ನನ್ನದಾಗಲಿ ಎಂದು ಹೇಳಿದಾಗ ಗತ್ಯಂತರವಿಲ್ಲದೆ ರೈತ ಒಪ್ಪಿಕೊಂಡ.
ಮುಂದೆ ಆ ಶ್ರೀಮಂತ ವ್ಯಕ್ತಿ ರೈತನ ಮಗನನ್ನು ತನ್ನೊಂದಿಗೆ ಕರೆದೊಯ್ದು ಆತನಿಗೆ ಉನ್ನತ ಶಿಕ್ಷಣ ಕೊಡಿಸಿದ. ತೀಕ್ಷ್ಣಮತಿಯಾಗಿದ್ದ ರೈತನ ಮಗ ಎಲ್ಲ ತರಗತಿಗಳಲ್ಲಿ ಉನ್ನತ ಅಂಕಗಳನ್ನು ಪಡೆದು ಮುಂದೆ ವೈದ್ಯಕೀಯ ಪದವಿ ಪಡೆದನು. ಕೆಲ ವರ್ಷಗಳ ತರುವಾಯ ರೋಗ ಪ್ರತಿ ರೋಧಕ ಶಕ್ತಿಯನ್ನು ನೀಡುವ ಪೆನ್ಸಿಲಿನ್ ಚುಚ್ಚುಮದ್ದನ್ನು ಕಂಡುಹಿಡಿದನು. ಆತನೇ ಜಗತ್ಪ್ರಸಿದ್ಧ ವೈದ್ಯ ವಿಜ್ಞಾನಿ ಅಲೆಕ್ಸಾಂಡರ್ ಫ್ಲೆಮಿಂಗ್.
ವಿಶ್ವದ ಎರಡನೇ ಯುದ್ಧಕ್ಕೂ ಮುನ್ನ ನಿಮೋನಿಯಾ ಗೆ ಗುರಿಯಾಗಿ ಸಾವಿನ ದವಡೆಯಲ್ಲಿದ್ದ ಶ್ರೀಮಂತನ ಮಗನನ್ನು ಉಳಿಸಿದ್ದು ಅಲೆಕ್ಸಾಂಡರ್ ಫ್ಲೆಮಿಂಗ್ ಕಂಡುಹಿಡಿದ ಚುಚ್ಚುಮದ್ದು ಪೆನ್ಸಿಲಿನ್. ಅಲೆಕ್ಸಾಂಡರ್ ಫ್ಲೆಮಿಂಗನ ನ್ನು ಹಾಗೆ ಕರೆದೊಯ್ದು ವೈದ್ಯ ವಿಜ್ಞಾನಕ್ಕೆ ಕೊಡುಗೆಯಾಗಿ ಕೊಟ್ಟ ಶ್ರೀಮಂತ ವ್ಯಕ್ತಿಯ ಹೆಸರು ರಾಂಡಾಲ್ಫ್ ಚರ್ಚಿಲ್ ಮತ್ತು ಆತನ ಆವಿಷ್ಕಾರದಿಂದ ಪುನರ್ಜೀವನ ಪಡೆದ ಶ್ರೀಮಂತನ ಮಗ ಮುಂದೆ ಇಂಗ್ಲೆಂಡ್ ನ ಪ್ರಧಾನಿಯಾಗಿ ಆಯ್ಕೆಯಾದ ವಿನ್ಸ್ಟನ್ ಚರ್ಚಿಲ್.
ಈ ಘಟನೆಯನ್ನು ಕುರಿತು ನೆನಪು ಮಾಡಿಕೊಂಡ ವಿನ್ಸ್ಟನ ಚರ್ಚಿಲ್ ರವರು ಹೇಳಿದ್ದು ನೀನು ಮಾಡಿದ ಒಳ್ಳೆಯ ಕರ್ಮದ ಫಲ ಖಂಡಿತವಾಗಿಯೂ ನಿನಗೆ ದೊರೆಯುತ್ತದೆ ಎಂದು.... ಅದೆಷ್ಟೋ ನಿಜ ಅಲ್ಲವೇ ಈ ಮಾತುಗಳು!

# ಶುದ್ಧೀಕರಿಸಿದ ನೀರಿಗೆ ಆದ್ಯತೆ ನೀಡಿ

### ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಕೆ.ವಿ.ತ್ರಿಲೋಕ ಚಂದ್ರ ಹೇಳಿಕೆ | ಮಾಸಿಕ ಪ್ರಗತಿ ಪರಿಶೀಲನಾ ಸಭೆ



■ **ಹಂಪಿ ಟೈಮ್ಸ್ ಬಳ್ಳಾರಿ**
ಜಿಲ್ಲೆಯ ಎಲ್ಲಾ ಗ್ರಾಪಂ ವ್ಯಾಪ್ತಿಯಲ್ಲಿ ಸಮರ್ಪಕವಾಗಿ ಕ್ಲೋರಿನೇಷನ್‌ನೊಂದಿಗೆ ಶುದ್ಧೀಕರಣಗೊಳಿಸಿದ ನೀರು ಪೂರೈಕೆಗೆ ಆದ್ಯತೆ ನೀಡಬೇಕು ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಕೆ.ವಿ.ತ್ರಿಲೋಕಚಂದ್ರ ಅವರು ಎಲ್ಲಾ ತಾಲ್ಲೂಕಿನ ತಾಪಂ ಇಒಗಳಿಗೆ ಸೂಚಿಸಿದರು.
ನಗರದ ಜಿಲ್ಲಾ ಪಂಚಾಯತ್‌ನ ನಜೀರ್‌ಸಾಬ್ ಸಭಾಂಗಣದಲ್ಲಿ ಶುಕ್ರವಾರ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮದ (20 ಅಂಶ ಸೇರಿದಂತೆ) ಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

**ನೀರಿನ ಮೂಲಗಳ ಪರಿಶೀಲನೆ ನಡೆಸಿ:**
ಮುಂಗಾರು ಪೂರ್ವ ಮಳೆ ಆರಂಭಗೊಂಡಿರುವ ಹಿನ್ನಲೆಯಲ್ಲಿ ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆ ಇದ್ದು, ಸಾರ್ವಜನಿಕರಿಗೆ ಕುಡಿಯುವ ನೀರನ್ನು ಕುದಿಸಿ ಆರಿಸಿ ಕುಡಿಯುವಂತೆ ಅರಿವು ಮೂಡಿಸಬೇಕು. ಯಾವುದೇ ಕಾರಣಕ್ಕೂ ಕಲುಷಿತ ನೀರು ಪೂರೈಕೆಯಾಗಬಾರದು. ಇದರ ಬಗ್ಗೆ ಎಚ್ಚರ ವಹಿಸಬೇಕು. ನಿರಂತರವಾಗಿ ನೀರಿನ ಮೂಲಗಳನ್ನು ಪರಿಶೀಲನೆ ನಡೆಸುತ್ತಿರಬೇಕು. ನೀರಿನ ಸಂಗ್ರಹಾಗಾರಗಳನ್ನು ಶುಚಿಗೊಳಿಸುತ್ತಿರಬೇಕು. ನೀರಿನ ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸಿದ ನಂತರವೇ ಸರಬರಾಜು ಮಾಡಬೇಕು ಎಂದು ನಿರ್ದೇಶನ ನೀಡಿದರು.

**ಬಿತ್ತನೆ ಬೀಜ, ರಸಗೊಬ್ಬರ ಪೂರೈಕೆಯಲ್ಲಿ ಕೊರತೆಯಾಗದಿರಲಿ:**
ಜಿಲ್ಲೆಯಲ್ಲಿ ಪೂರ್ವ ಮುಂಗಾರು ಹಾಗೂ ಮುಂಗಾರು ಮಳೆ ಉತ್ತಮವಾಗಿದೆ, ಕೃಷಿ ಚಟುವಟಿಕೆಗಳು ಉತ್ತಮವಾಗಿ ನಡೆಯುತ್ತಿವೆ. ಜಿಲ್ಲೆಯ ರೈತರಿಗೆ ಬಿತ್ತನೆ ಬೀಜ, ರಸಗೊಬ್ಬರ ಮತ್ತು ಕೀಟನಾಶಕಗಳ ಪೂರೈಕೆಯಲ್ಲಿ ಯಾವುದೇ ಕೊರತೆಯಾಗದಂತೆ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ಕಳಪೆ ಬಿತ್ತನೆ ಬೀಜ ಪೂರೈಕೆಯಾಗದಂತೆ ನಿಗಾವಹಿಸಬೇಕು. ತಪ್ಪದೇ ಬೆಳೆ ವಿಮೆಗೆ ನೋಂದಾಯಿಸಿಕೊಳ್ಳಲು ತಿಳಿಸಬೇಕು ಎಂದು ಕೃಷಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.
ಜಿಲ್ಲೆಯಲ್ಲಿ ಮುಂಗಾರು ಹಂಗಾಮಿಗೆ ಭತ್ತ, ಜೋಳ, ಮೆಕ್ಕೆಜೋಳ, ಸೂರ್ಯಕಾಂತಿ, ಶೇಂಗಾ, ತೊಗರಿ, ರಾಗಿ ಸೇರಿ ಒಟ್ಟು 16,223 ಕ್ವಿಂಟಾಲ್ ಬಿತ್ತನೆ ಬೀಜ ದಾಸ್ತಾನಿದೆ. ರೈತರ ಬೇಡಿಕೆಗೆ ಅನುಗುಣವಾಗಿ ಬಿತ್ತನೆ ಬೀಜಗಳನ್ನು ರೈತ ಸಂಪರ್ಕ ಕೇಂದ್ರಗಳಲ್ಲಿ ದಾಸ್ತಾನು ಮಾಡಲಾಗಿದೆ. ವಿತರಣೆ ಕಾರ್ಯ ಪ್ರಾರಂಭವಾಗಿದ್ದು, 921 ಕ್ವಿಂಟಾಲ್ ಬಿತ್ತನೆ ಬೀಜ ವಿತರಣೆಯಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕ ಕೆ.ಮಲ್ಲಿಕಾರ್ಜುನ ಅವರು ಸಭೆಗೆ ತಿಳಿಸಿದರು.
ಪ್ರಸ್ತಕ ಸಾಲಿಗೆ ಶೈಕ್ಷಣಿಕ ತರಗತಿಗಳು ಆರಂಭಗೊಂಡಿದ್ದು, ಪ್ರೌಢಶಾಲೆಗಳು, ಪದವಿಪೂರ್ವ ಕಾಲೇಜುಗಳಿಗೆ ಈಗಾಗಲೇ ಒದಗಿಸಿದ ಸ್ಮಾರ್ಟ್‌ಕ್ಲಾಸ್‌ಗಳು ಉಪಯೋಗವಾಗುತ್ತಿವೆಯೇ? ಎಂದು ವಿಚಾರಿಸಿದ ಅವರು, ಜಿಲ್ಲೆಯಲ್ಲಿ ಕಲಿಕೆಯ ಬೆಳವಣಿಗೆಯಾಗಬೇಕು. ಅಭ್ಯರ್ಥಿಗಳ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಪಯುಕ್ತವಾಗಬೇಕು ಎಂದು ತಿಳಿಸಿದರು.
ಸರ್ಕಾರಿ ಸಂಬಂಧಿತ ಕೆಲಸಗಳಿಗೆ ಸಾರ್ವಜನಿಕರನ್ನು ಅಲೆದಾಡಿಸುವಂತಿಲ್ಲ. ನಿಗದಿತ ಕಾಲಾವಧಿಯೊಳಗೆ ಕೆಲಸ ಮಾಡಿಕೊಡಬೇಕು ಎಂದು ಎಲ್ಲಾ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.
ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವಸತಿನಿಲಯಗಳಿಗೆ ಪೂರೈಸಿದ ಸಾಮಾಗ್ರಿಗಳು, ವಿದ್ಯಾರ್ಥಿಗಳಿಗೆ ಪೂರೈಸಿದ ಹಾಸಿಗೆ ಹಾಗೂ ಇತರೆ ವಸ್ತುಗಳ ಮಾಹಿತಿ ನೀಡಬೇಕು ಎಂದು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳಿಗೆ ತಿಳಿಸಿದರು.
ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಮಾತನಾಡಿ, ವಸತಿನಿಲಯಗಳಲ್ಲಿ ಸ್ವಚ್ಛತೆ ಮತ್ತು ಊಟದ ವ್ಯವಸ್ಥೆ ಕುರಿತು ದೂರು ಕೇಳಿ ಬರುತ್ತಿದ್ದು, ಅಧಿಕಾರಿಗಳು ವಸತಿನಿಲಯಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಬೇಕು ಎಂದು ತಿಳಿಸಿದರು.

**"ಪ್ರಗತಿ ಆಪ್"ನಲ್ಲಿ ಮಾಹಿತಿ ನಮೂದಿಸಿ:**
ಜಿಲ್ಲೆಯಲ್ಲಿ ವಿವಿಧ ವಸತಿ ಶಾಲೆಗಳಿಗೆ ಭೇಟಿ ನೀಡಲು ವೇಳಾಪಟ್ಟಿ ಮತ್ತು ಅಲ್ಲಿನ ಸಮಸ್ಯೆಗಳ ಕುರಿತು ಪರಿಶೀಲನೆ ನಡೆಸಿದ ವಿವರ ನಮೂದಿಸಲು, ರಾಜ್ಯದಲ್ಲಿಯೇ ಮೊದಲ ಬಾರಿಗೆ ವಿಶೇಷವಾಗಿ ಜಿಪಂ ವತಿಯಿಂದ ಪ್ರಗತಿ ಆಪ್ ರಚಿಸಿದೆ. ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ತಮ್ಮ ಇಲಾಖೆಗಳಿಗೆ ಸಂಬಂಧಿಸಿದಂತೆ ಪರಿಣಾಮಕಾರಿಯಾಗಿ ಕೆಲಸ ಮಾಡಲು ಹಾಗೂ ವೇಳಾಪಟ್ಟಿಯಂತೆ ಕ್ಷೇತ್ರ ಭೇಟಿ, ಪರಿಶೀಲನೆ ನಡೆಸಲು ಮತ್ತು ಪರಿಶೀಲನೆ ನಡೆಸಿದ ಎಲ್ಲಾ ವಿವರಗಳನ್ನು ಅದರಲ್ಲಿ ನಮೂದಿಸಬೇಕು ಎಂದು ಜಿಪಂ ಸಿಇಒ ರಾಹುಲ್ ಶರಣಪ್ಪ ಸಂಕನೂರ ಅವರು ಅಧಿಕಾರಿಗಳಿಗೆ ಸೂಚಿಸಿದರು.
ಸಭೆಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಸಂದೀಪ್‌ಸೂರ್ಯವಂಶಿ,ಉಪವಿಭಾಗಾಧಿಕಾರಿ ಹೇಮಂತ್.ಎನ್ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು, ತಾಪಂ ಇಒಗಳು ಹಾಗೂ ಇತರರು ಉಪಸ್ಥಿತರಿದ್ದರು.

# ಕಮಲಾ ಹಂಪನಾ ಆತ್ಮಕ್ಕೆ ಚಿರಶಾಂತಿ ದೊರೆಯಲಿ: ಸಿಎಂ

■ **ಹಂಪಿ ಟೈಮ್ಸ್ ಬೆಂಗಳೂರು**
ಕನ್ನಡದ ಉತ್ತಮ ಸಾಹಿತಿಯನ್ನು ನಾವು ಕಳೆದುಕೊಂಡಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.
ಅವರು ಇಂದು ರವೀಂದ್ರಕಲಾ ಕ್ಷೇತ್ರದಲ್ಲಿ ಹಿರಿಯ ಸಾಹಿತಿ ಡಾ॥ ಕಮಲ ಹಂಪನಾ ಅವರ ಪ್ರಾರ್ಥಿವ ಶರೀರ ದರ್ಶನ ಮಾಡಿದ ನಂತರ ಮಾಧ್ಯಮದವರೊಂದಿಗೆ ಮಾತನಾಡಿದರು.
ಕಮಲಾ ಹಂಪನಾ ಅವರನ್ನು ನಾಲ್ಕೈದು ತಿಂಗಳ ಹಿಂದೆ ಭೇಟಿಯಾಗಿದ್ದೆ. ಮಹಿಳಾ ಸಾಹಿತಿಗಳ ಪೈಕಿ ಅತಿ ಹೆಚ್ಚು ಅಂದರೆ 48 ಕೃತಿಗಳನ್ನು ಬರೆದಿದ್ದಾರೆ. ಬೋಧಕರಾಗಿ, ಸಂಶೋಧಕರಾಗಿ, ಸಾಹಿತಿಯಾಗಿ ಕನ್ನಡ ಭಾಷೆಗಾಗಿ ಬಹಳ ಶ್ರಮಿಸಿದ್ದಾರೆ. ಪ್ರಾಕೃತ ಭಾಷೆಯ ಕುರಿತು ಸಂಶೋಧನೆ ಮಾಡಿದ್ದಾರೆ. ಬೆಂಗಳೂರು, ಮೈಸೂರು, ವಿಜಯನಗರಗಳಲ್ಲಿ ಕನ್ನಡ ಬೋಧಕರಾಗಿ ಕೆಲಸ ಮಾಡಿದ್ದಾರೆ ಎಂದರು. ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲಿ ಹಂಪನಾ ಮತ್ತು ಅವರ ಕುಟುಂಬದವರಿಗೆ ದುಃಖ ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥನೆ ಮಾಡುವುದಾಗಿ ಮುಖ್ಯಮಂತ್ರಿಗಳು ತಿಳಿಸಿದರು.



# ಜೂನ್ ಮಾಹೆಯ ಆಹಾರ ಧಾನ್ಯ ಬಿಡುಗಡೆ: ಸಕೀನಾ

■ **ಹಂಪಿ ಟೈಮ್ಸ್ ಬಳ್ಳಾರಿ**
ಅನ್ನಭಾಗ್ಯ ಯೋಜನೆಯಡಿ ಜೂನ್ ತಿಂಗಳ ಆಹಾರ ಧಾನ್ಯ ವಿತರಣೆ ಮಾಡಲಾಗುತ್ತಿದೆ ಎಂದು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕರಾದ ಸಕೀನಾ ಅವರು ತಿಳಿಸಿದ್ದಾರೆ.
ಅಂತ್ಯೋದಯ ಅನ್ನ ಯೋಜನೆ ಪಡಿತರ ಚೀಟಿಗೆ 14 ಕೆ.ಜಿ ಜೋಳ ಮತ್ತು ಪಿ.ಹೆಚ್.ಹೆಚ್ ಫಲಾನುಭವಿಗಳಿಗೆ 2 ಕೆ.ಜಿ ಜೋಳ ಹಾಗೂ ಎಎವೈ ಪಡಿತರ ಚೀಟಿಗೆ 21 ಕೆ.ಜಿ ಅಕ್ಕಿ ಮತ್ತು ಪಿ.ಹೆಚ್.ಹೆಚ್ ಫಲಾನುಭವಿಗಳಿಗೆ 3 ಕೆ.ಜಿ ಅಕ್ಕಿ ವಿತರಣೆ ಮಾಡಲಾಗುತ್ತಿದೆ.
ಅಂತ್ಯೋದಯ ಅನ್ನ ಯೋಜನೆ ಹಾಗೂ ಆದ್ಯತಾ ಪಡಿತರ ಚೀಟಿದಾರರು ಹತ್ತಿರದ ಸಂಬಂಧಿಸಿದ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರ ಪಡೆಯಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಿತ್ಯ ಪಂಚಾಂಗ

ಮಾಸ: ಜ್ಯೇಷ್ಠ । ಸಂವತ್ಸರ: ಕ್ರೋಧಿ

**23–06–2024 – ಭಾನುವಾರ**

| | |
|---|---|
| ತಿಥಿ | : ದ್ವಿತಿಯ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಪೂರ್ವಾಷಾಡ |
| ಯೋಗ | : ಬ್ರಹ್ಮ |
| ಕರಣ | : ತೈತುಲ |
| ಸೂರ್ಯೋದಯ | : 05:43:48 |
| ಸೂರ್ಯಾಸ್ತ | : 19:14:45 |
| ರಾಹು | : 17:33–19:15 |
| ಯಮಘಂಡ | : 12:29–14:11 |
| ಗುಳಿಕ | : 15:52–17:33 |

## ತುಂಗಭದ್ರಾ ನೀರಿನ ಮಟ್ಟ



**ಶನಿವಾರ : 22–06–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1582.11 ಅಡಿ |
| ಒಳ ಹರಿವು | 638 ಕ್ಯುಸೆಕ್ |
| ಹೊರ ಹರಿವು | 1966 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 5.579 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1579.45 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 317 ಕ್ಯುಸೆಕ್ |
| ಸಾಮರ್ಥ್ಯ | 4.209 ಟಿಎಂಸಿ |

## ವೃತ್ತಿ ತರಬೇತಿಗೆ ಅರ್ಜಿ ಆಹ್ವಾನ

ಮೊದಲ ಪುಟದಿಂದ

ಎಸ್‌ಡಬ್ಲ್ಯೂಡಿ 187 ಪಕವಿ 2010 ಬೆಂಗಳೂರು ದಿನಾಂಕ:25–11–2011 ರನ್ವಯ ಅಭ್ಯರ್ಥಿಗಳು ಪ್ರವರ್ಗ–1, ಪ್ರವರ್ಗ–2(ಎ), ಪ್ರವರ್ಗ–3(ಎ) ಮತ್ತು ಪ್ರವರ್ಗ–3(ಬಿ)ಗೆ ಸೇರಿದವರಾಗಿರಬೇಕು, ಸರ್ಕಾರಿ ಆದೇಶ ಸಂಖ್ಯೆ:ಸಕಇ 446 ಬಿಎಂಎಸ್ 2005 ಬೆಂಗಳೂರು ದಿನಾಂಕ:1–12–2005ರ ಆದೇಶದಲ್ಲಿ ಶೇಕಡವಾರು ಪ್ರವರ್ಗ–1ರಲ್ಲಿ 2 ಅಭ್ಯರ್ಥಿಗಳನ್ನು ಅಯ್ಕೆ ಮಾಡಿ ಉಳಿದ ವರ್ಗಗಳಲ್ಲಿ ನಿಯಮಾನುಸಾರ 8 ಅಭ್ಯರ್ಥಿಗಳು ಒಟ್ಟು 10 ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು, ಅಭ್ಯರ್ಥಿಯು ಬಾರ್ ಕೌನ್ಸಿಲ್‌ನಲ್ಲಿ ಹೆಸರನ್ನು ನೋಂದಾಯಿಸಿರಬೇಕು, ತರಬೇತಿಗೆ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕಕ್ಕೆ ಹಿಂದೆ 2 ವರ್ಷಗಳೊಳಗಾಗಿ ಕಾನೂನು ಪದವಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು, ಕಾನೂನು ತರಬೇತಿಯು 4 ವರ್ಷಗಳ ಅವಧಿಯಾಗಿದ್ದು, ತಿಂಗಳಿಗೆ 4ಸಾವಿರ ತರಬೇತಿ ಭತ್ಯೆ ನೀಡಲಾಗುವುದು, ಕಾನೂನು ತರಬೇತಿಗೆ ವಿಜಯನಗರ ಜಿಲ್ಲೆಯಿಂದ 10 ಅಭ್ಯರ್ಥಿಗಳನ್ನು ಮಾತ್ರ ಆಯ್ಕೆ ಮಾಡಲಾಗುವುದು, ಪ್ರವರ್ಗ–1 15% 2 ಅಭ್ಯರ್ಥಿಗಳು, ಪ್ರವರ್ಗ–2ಎ 53% 5 ಅಭ್ಯರ್ಥಿಗಳು, ಪ್ರವರ್ಗ–3ಎ 15% 1 ಅಭ್ಯರ್ಥಿ, ಪ್ರವರ್ಗ–3ಬಿ 17% 2 ಅಭ್ಯರ್ಥಿಗಳು ಸೇರಿ ಒಟ್ಟು 100% 10 ಅಭ್ಯರ್ಥಿಗಳನ್ನು ತರಬೇತಿಗೆ ಆಯ್ಕೆ ಮಾಡಲಾಗುವುದು, ಹಿಂದುಳಿದ ವರ್ಗಗಳ ಪ್ರವರ್ಗ–1, ಪ್ರವರ್ಗ–2ಎ, 3ಎ ಹಾಗೂ 3ಬಿ ಅಭ್ಯರ್ಥಿಗಳಿಗೆ 38 ವರ್ಷ ಗರಿಷ್ಠ ವಯೋಮಿತಿ (ಅರ್ಜಿ ಸಲ್ಲಿಸಲು ಇರುವ ಕೊನೆಯ ದಿನಾಂಕಕ್ಕೆ) ಇರುತ್ತದೆ, ತರಬೇತಿಯ ಅವಧಿಯ ಮಧ್ಯಭಾಗದಲ್ಲಿ ಅಭ್ಯರ್ಥಿಯು ತರಬೇತಿಗೆ ಗೈರು ಹಾಜರಾದಲ್ಲಿ ಪಡೆಯಲಾಗಿರುವ ತರಬೇತಿ ಭತ್ಯೆಯ ಹಣವನ್ನು ಬಡ್ಡಿಯೊಂದಿಗೆ ಪಾವತಿಸಬೇಕಾಗುವುದು, ವಾರ್ಷಿಕ ಆದಾಯದ ಮಿತಿ ಪ್ರವರ್ಗ–1ರ ಅಭ್ಯರ್ಥಿಗಳಿಗೆ ರೂ.3.50 ಲಕ್ಷ, ಪ್ರವರ್ಗ–2ಎ, 3ಎ ಮತ್ತು 3ಬಿ ರೂ.2.50 ಲಕ್ಷಗಳ ವಾರ್ಷಿಕ ಆದಾಯದ ಮಿತಿಯನ್ನು ನಿಗದಿಪಡಿಸಲಾಗಿದೆ, ಆಯ್ಕೆಯಾದ ಅಭ್ಯರ್ಥಿಗಳನ್ನು ಜಿಲ್ಲಾ ಸಮಿತಿಯು ಜಿಲ್ಲಾ ಪಬ್ಲಿಕ್ ಪ್ರಾಸಿಕ್ಯೂಟರ್, ಸರ್ಕಾರಿ ವಕೀಲರು ಅಥವಾ ಕನಿಷ್ಟ 15 ವರ್ಷಗಳ ವೃತ್ತಿಯಲ್ಲಿ ಅನುಭವ ಹೊಂದಿರುವ ವಕೀಲರ ಅಧೀನದಲ್ಲಿ ತರಬೇತಿ ಪಡೆಯುವುದು, ಅಭ್ಯರ್ಥಿಗಳನ್ನು ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯಿಂದ ಸಂದರ್ಶನದಮೂಲಕಆಯ್ಕೆಮಾಡಲಾಗುವುದು, ಅಭ್ಯರ್ಥಿಗಳು ಅರ್ಜಿಯ ಜೊತೆಗೆ ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಅಥವಾ ಶಾಲಾ ವರ್ಗಾವಣೆ ಪ್ರಮಾಣ ಪತ್ರ ಮತ್ತು ಪದವಿ ಹಾಗೂ ಕಾನೂನು ಪದವಿಗಳಲ್ಲಿ ಪಡೆದ ಅಂಕಪಟ್ಟಿ ಪ್ರಮಾಣ ಪತ್ರದ ದೃಢೀಕರಣ ಪ್ರತಿಗಳನ್ನು ಲಗತ್ತಿಸುವುದು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳ ಕಚೇರಿ, ಮಾರುತಿ ನಿಲಯ, 35ನೇ ವಾರ್ಡ್, ಪುಣ್ಯಾನಂದಪುರಿ ನಗರ ಆಕಾಶವಾಣಿ ಹತ್ತಿರ, ಹೊಸಪೇಟೆ. ಇಲ್ಲಿಗೆ ಕಚೇರಿ ವೇಳೆಯಲ್ಲಿ ಅರ್ಜಿ ನಮೂನೆಯನ್ನು ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 08394–796292 ಸಂಪರ್ಕಿಸಿ.

# ಮಿತಿಮೀರಿ ಕುಡಿದರೆ ಇನ್ನೇನಾಗುತ್ತದೆ?

ಮಿತಿಮೀರಿ ಕುಡಿದರೆ ಇನ್ನೇನಾಗುತ್ತದೆ ಮೂರ್ನಾಲ್ಕು ಬಾರಿ ವಾಂತಿ ವಿಪರೀತ ಹ್ಯಾಂಗೋವರ್..
ಮಧ್ಯರಾತ್ರಿ ದಾಟಿತ್ತು..ಜೊತೆಗೆ ಪಾರ್ಟಿ ಮಾಡುತ್ತಿದ್ದವರೆಲ್ಲರಿಗೂ ಮನೆಯಿಂದ ಹೋಂ ಮಿನಿಸ್ಟರ್ ಗಳ ಫೋನ್ ಗಳು ಒಂದೊಂದಾಗಿ ಬರತೊಡಗಿದವು..ಹೋಂ ಮಿನಿಸ್ಟರ್ ಫೋನ್ ಎಂದು ಗೊತ್ತಾದ ತಕ್ಷಣ ಅವರವರ ನಶೆ ಸರ್ರ್ ಅಂತ ಇಳಿದುಹೋಗಿದ್ದವು..
"ಬಂದೇ ಕಣಮ್ಮಿ ಇಲ್ಲೇ ಆನ್ ದಿ ವೇ" ಅಂತ ಒಬ್ಬೊಬ್ಬರಾಗಿ ಚಡ್ಡಿಯಲ್ಲಿ ಮೂತ್ರಿಸಿಕೊಂಡು ಜಾಗ ಖಾಲಿ ಮಾಡಿದ್ದರು

ಅವರೆಲ್ಲರ ಈ ಹಠಾತ್ ಪಲಾಯನವನ್ನು ನೆನಸಿಕೊಂಡು ಇವನು ಒಬ್ಬನೇ ಜೋರು ಜೋರಾಗಿ ನಕ್ಕ...
Poor fellows ಅಂದ ಒಬ್ಬನೇ ಗಟ್ಟಿಯಾಗಿ.. ಸಿಗಾರ್ ಹಚ್ಚಿ ಅದರ ಬೂದಿಯನ್ನು ವಿಸ್ಕಿಗೆ ಬೆರಸಿ ಐಸ್ ಹಾಕಿ ಕಲೆಸಿ ಗುಟುಕರಿಸತೊಡಗಿದ...
ಅಂದ ಹಾಗೆ ಇವನ ಹೆಸರು ರಾಜಮೋಹನ್ , ಆತ್ಮೀಯರಾದವರೆಲ್ಲರೂ ಇವನನ್ನು ಮೋನಿ ಮೋನಿ ಎಂತಲೇ ಕರೆದು ಕೀಟಲೆ ಮಾಡುತ್ತಿದ್ದರು..

ರಾತ್ರಿ ಹನ್ನೆರಡು ದಾಟಿದೆ,ಅಷ್ಟೊಂದು ಡ್ರಿಂಕ್ಸ್ ಕರುಳಿಗಿಳಿಸಿದರೂ ಕಂಗಳಿಗೆ ನಶೆ ಏರುತ್ತಿಲ್ಲ... ಅವನು ಸಧ್ಯ ಒಬ್ಬೊಂಟಿ ..ಅವನನ್ನು ಬಹುದೂರದ ಊರಿಗೆ ವರ್ಗ ಮಾಡಿದ್ದರು..ಸರ್ಕಾರಿ ಅಧಿಕಾರಿ ಆತ... ಕೋಟಿಗಟ್ಟಲೆ ಮನುಷ್ಯ.. ಯೂವ್ಯಾವುದೋ ವಾಮ ಮಾರ್ಗಗಳಲ್ಲಿ ಹಣ ಮಾಡಿ ಗುಡ್ಡೆ ಹಾಕಿಬಿಟ್ಟಿದ್ದ..

ಹೆಂಡತಿಗೆ ಕೆಜಿಗಟ್ಟಲೆ ಬಂಗಾರ,ಮಕ್ಕಳಿಗೆ ಕಾರುಗಳು,ಬೆಲೆ ಬಾಳುವ ಸ್ಕೂಟರ್ ಗಳು,ಲ್ಯಾಪ್ ಟಾಪ್ ಗಳು,ಲಕ್ಷಾಂತರ ಬೆಲೆ ಬಾಳುವ ಮೊಬೈಲ್ ಗಳು,ಹತ್ತಾರು ಮನೆಗಳು,ಕೋಟಿಗಟ್ಟಲೆ ಬೇನಾಮಿ ಆಸ್ತಿ...

ಮೆರೆದಿದ್ದೆಷ್ಟು...ವಿಲಾಸ ಜೀವನ,ಮೋಜು ಮಸ್ತಿ,ಡ್ಯಾನ್ಸ್ ಕ್ಲಬ್ ಗಳು.ಹೆಂಗಸರು...ತನ್ನಷ್ಟು ಮಜಾ ಯಾರು ಮಾಡಿಲ್ಲ ಅನಿಸಿತು ಮೋನಿಗೆ.. ಏನೆಲ್ಲಾ ಮಾಡಿದರೂ, ಸಂಪತ್ತು ಐಷಾರಾಮಿನಲ್ಲಿ ಅವರನ್ನಿಟ್ಟರೂ ಓದದ ಮಕ್ಕಳು. ..
ಮಕ್ಕಳಿಗೂ ಹಲ್ಕಟ್ ಸ್ನೇಹಿತರು..

ಹೆಂಡತಿಗೆ ಇನ್ನೂ ಬೇಕು ಬೇಕು ಎನ್ನುವ ಸಂಪತ್ತು, ಬಂಗಾರ ಆಸ್ತಿಗಳ ಮೋಹ..
ಒಂದು ದಿನ ಮೋನಿ ರಜೆ ಹಾಕಿದರೆ ಅವನ ಹೆಂಡತಿ ಕೆಂಡಾಮಂಡಲ ಆಗುತ್ತಾಳೆ,ಒಂದು ದಿನದ ಹರಾಮಿ ಆದಾಯ ಹೋಗುತ್ತದಲ್ಲಾ ಎನ್ನುವ ಕೊರಗು ಆಕೆಗೆ..ಕಿರುಚಾಡುತ್ತಾಳೆ..

ಮಕ್ಕಳು ಅಪರೂಪಕ್ಕೆ ಶಾಲಾ ಕಾಲೇಜ್ ಗಳಿಗೆ ಹೋಗುತ್ತಿದ್ದಾರೆ ಎನ್ನುವುದು ಆತನಿಗೆ ಇತ್ತೀಚೆಗೆ ಗೊತ್ತಾಗಿ ಬಹಳ ನೊಂದಿದ್ದ..ಹೇಳುವಂತೆಯೂ ಇಲ್ಲ..
ಸಾಯಂಕಾಲ ಆದರೆ ಸಾಕು ಹೆಂಡತಿ ತನ್ನ ಅಂತಸ್ತು ತೋರಿಸಲು ಸಂಘ,ಕ್ಲಬ್ ಅಂತ ಸುತ್ತುತ್ತಾಳೆ..ಶ್ರೀಮಂತ ಮನೆತನದ ಹೆಂಗಳನ್ನು ಸ್ನೇಹಿತೆಯರನ್ನಾಗಿ ಮಾಡಿಕೊಂಡಿದ್ದಾಳೆ..
ಇತ್ತೀಚೆಗೆ ಆಕೆ ವೈನ್ ಕುಡಿದು ಅವರೊಟ್ಟಿಗೆ ಡ್ಯಾನ್ಸ್ ಮಾಡುತ್ತಿದ್ದುದನ್ನು ಓರ್ವರು ಮೊಬೈಲ್ ನಲ್ಲಿ ಸೆರೆ ಹಿಡಿದು ಇವನಿಗೆ ತೋರಿಸಿದ್ದರು.. ಇವನು ಕರಗಿ ಹೋದ.. ಕಣ್ಣೀರ್ಗರೆದ..

ನಾನು ಹಣ ಯಾವ್ಯಾವುದೋ ಮಾರ್ಗದಲ್ಲಿ ಸಂಪಾದಿಸಬೇಕು..ಹರಾಮಿ ದುಡ್ಡಿನಲ್ಲಿ ಇವರದು ಮಜಾ, ಹರಾಮಿ ದುಡ್ಡು ಇದನ್ನಲ್ಲದೇ ಮತ್ತೇನನ್ನು ಮಾಡಿಸಲು ಸಾಧ್ಯ ಅಂದುಕೊಂಡ...

ಮನೆಗೆ ಫೋನ್ ಮಾಡಿದ.. ಹೆಂಡತಿ ಫೋನ್ ತೆಗೆಯುತ್ತಿಲ್ಲ..ಮಕ್ಕಳಿಗೆ ಫೋನ್ ಮಾಡಿದ ಅವರು ಈತನ ನಂಬರ್ ನ್ನು ಎಂದೋ ಬ್ಲಾಕ್ ಲಿಸ್ಟ್ ಗೆ ಹಾಕಿದ್ದರು..

ಇದಕ್ಕೆಲ್ಲ ಕಾರಣ ಹರಾಮಿ ದುಡ್ಡು ಎಂದುಕೊಂಡು ಹಣೆ ಜಜ್ಜಿಕೊಂಡ..
ಫೋನ್ ಮತ್ತೆ ಕೈಗೆತ್ತಿಕೊಂಡ
ಒಂದು ನಂಬರ್ ಗೆ ಕಾಲ್ ಮಾಡಿದ, ತಕ್ಷಣವೇ ಲಿಫ್ಟ್ ಮಾಡಿದರು..
"ನಮಸ್ಕಾರ ಸಾರ್ ,ಸಾರ್ ನಾನು"ತೊದಲಿದ

–ಗೊತ್ತಾಯ್ತು ಕಣೋ..ಯಾಕೆ ಮಗಾ ಮಲಗಲಿಲ್ವಾ..ರಾತ್ರಿ ಒಂದೂವರೆ ಆಯ್ತು.."
"ನಿದ್ದೆ ಬರ್ತಿಲ್ಲ ಸರ್ "..ಅಳತೊಡಗಿದ
"ಯಾಕೋ ಏನಾಯ್ತು ತೊದಲ್ತಾ ಇದೀಯ"
"ಹೌದು ಸರ್ ಕ್ಷಮಿಸಿ ಕುಡಿದಿದ್ದೀನಿ"
"ಏನ್ ಹೇಳ್ತಿದೀಯ ನೀನು ಮೋಹನ್ ತಾನೆ ಮಾತಾಡ್ತಿರೋದು"
"ಹೌದು ಸರ್ ನಾನೇ ಸರ್ ನಿಮ್ಮ ಮೋನಿ"
"ಇರ್ಲಿ ಏನಾಯ್ತು ಹೇಳು
ಮಗಾ"
ಎಲ್ಲವನ್ನೂ ಇಂಚಿಂಚೂ ಬಿಡದೇ ಹೇಳಿದ..
ಮಕ್ಕಳು ತನ್ನ ಮೇಲೆ ಕೈ ಮಾಡಲು ಬಂದಿದ್ದನ್ನೂ ಸಹ ಹೇಳಿದ...
ಆ ಕಡೆ ಕೇಳಿಸಿಕೊಂಡ ದನಿ ಗದ್ಗದಿತವಾಯಿತು...
"ಸರ್,ನನ್ನನ್ನು ಕ್ಷಮಿಸಿ,ಮೌಲ್ಯಗಳನ್ನು ಶಾಲೆಯಲ್ಲಿ ತಾವು ಕಲಿಸಿದಿರಿ.ಅದರಂತೆ ನಾನು ಬದುಕಬೇಕಿತ್ತು..ನೀವು ಅವುಗಳನ್ನು ಪಾಲಿಸಿ ಇನ್ನೂ ಆನಂದದಿಂದ ಬದುಕಿದ್ದೀರಿ,ನಾನು ಅವುಗಳನ್ನು ಪಾಲಿಸದೇ ಅಕ್ಷರಶಃ ಸತ್ತುಹೋಗಿದ್ದೇನೆ" ಅಂದು ಅಳತೊಡಗಿದ..

"ಸರ್,ನನಗೆ ನೆಮ್ಮದಿ ಶಾಂತಿ ಬೇಕು ಸರ್,ಹೆಂಡತಿ ಮಕ್ಕಳು ಸಂಪತ್ತು ಯಾವುದೂ ಬೇಡ ಸರ್ ,ನನ್ ಮನಸಿಗೆ ನೆಮ್ಮದಿ ಇಲ್ಲ ನೆಮ್ಮದಿಬೇಕು ಸರ್" ಮಗುವಿನಂತೆ ಅಳತೊಡಗಿದ..

"ಮಗಾ,ನೊಂದುಕೊಳ್ಳಬೇಡ, ಅಳುವುದನ್ನು ಮೊದಲು ನಿಲ್ಲಿಸು..ನೀನಳಬಾರದು..ನಾಳೆಯಿಂದ ನೀನು ಮನುಷ್ಯನಾಗು.. ಕಾಯಕದಲ್ಲಿ ದ್ರೋಹ ಮಾಡದೇ ಕಾಯಕದಲ್ಲಿ ದೇವರನ್ನು ಕಾಣು,ಪ್ರಾಮಾಣಿಕನಾಗು,ನಾನು ಈಗಲೇ ಬರಲೇನು.." ಎಂಬತ್ತರ ಆ ದನಿ ಮರುಗಿತು
"ಈಗ ಬರುವುದು ಬೇಡ ಸರ್..ನಾಳೆ ನಾನೇ ಬರುವೆ ತಮ್ಮ ದರ್ಶನ ಪಡೆಯುವೆ..ಸರ್ ದಯಮಾಡಿ ನನ್ನನ್ನು ನಿಮ್ಮ ಮಗನೆಂದು ತಿಳಿದು ನನ್ನನ್ನು ಕ್ಷಮಿಸುವಿರಾ..ನೀವು ಕ್ಷಮಿಸಿದರೆ ಮುಕ್ಕೋಟಿ ದೇವತೆಗಳು ಕ್ಷಮಿಸಿದಂತೆ" ಆತ ಅಂಗಲಾಚಿದ

"ಮಗಾ,ನಿನ್ನ ಮೇಲಿನ ಅಭಿಮಾನ ಪ್ರೀತಿ ಮೊದಲಿಗಿಂತ ಈಗ ಸಾವಿರ ಪಟ್ಟು ಹೆಚ್ಚಾಗುತ್ತಿದೆ" ಆ ಹಿರಿ ಜೀವ ಅತ್ತಲಿಂದ ನುಡಿಯಿತು
"ಸಂತೋಷ ಆಯ್ತು ಸರ್,ನನಗೆ ನೆಮ್ಮದಿ ಸಿಕ್ಕಿತು ಸರ್,ಧನ್ಯನಾದೆ ಸರ್" ಮೋನಿ ಒಂದೇ ಉಸಿರಲ್ಲಿ ಹೇಳಿದ..

"ಮಗಾ ಮಲಗು ಕಣೋ,ನಿರಾಳವಾಗು ಮಲಗು ನಾಳೆ ಬಾ ಮಗಾ,ನಿನಗಾಗಿ ಕಾಯವೆ,ಮಲಗು ಶುಭರಾತ್ರಿ" ಆ ಕಡೆಯಿಂದ ಫೋನ್ ಕಟ್ ಆಯ್ತು..
ಅಕ್ಷರ ಕಲಿಸುವುದರ ಜೊತೆ ಮೌಲ್ಯಗಳನ್ನು ಕಲಿಸಿದ ಗುರುವಿಗೆ ಎಂದೂ ಆಗಲಾರದಷ್ಟು ಆನಂದವಾಗಿತ್ತು..
ಮೋನಿ ನಾಳೆ ಹೊಸ ಮನುಷ್ಯ ಆಗಿ ನನ್ ನೋಡಾಕ ಬರ್ತಾನ ಅಂತ ಹಿಗ್ಗಿದರು..ನಿದ್ರೆ ಆವರಿಸಿತು
ಇತ್ತ ಮೋನಿಯೂ ನಿರಮ್ಮಳವಾಗಿ ನಿದ್ರೆಗೆ ಜಾರಿದ..
ಬೆಳಗಿನ ಜಾವದಲ್ಲಿ ಗುರು ಶಿಷ್ಯರು ನಿದ್ರೆಯಿಂದ ಚಿರನಿದ್ರೆಗೆ ಒಟ್ಟಿಗೆ ಜಾರಿಬಿಟ್ಟಿದ್ದರು..ವಿಧಿವಿಲಾಸ

**– ಮಹಿಮ**

# ತೋಟಗಾರಿಕೆ ಇಲಾಖೆ ಅರ್ಜಿ ಅಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

2024–25ನೇ ಸಾಲಿನ ವಿಜಯನಗರ ಜಿಲ್ಲೆಯ ತೋಟಗಾರಿಕೆ ಇಲಾಖೆಯಿಂದ ವಿವಿಧ ಯೋಜನೆಗಳ ಅಡಿಯಲ್ಲಿ ಫಲಾನುಭವಿಗಳಿಗಾಗಿ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ.

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ ಅಡಿಯಲ್ಲಿ ಹಣ್ಣು (ಬಾಳೆ, ದಾಳಿಂಬೆ, ಮಾವು) ಹೂವು ಮತ್ತು ಹೈಬ್ರಿಡ್ ತರಕಾರಿಗಳ ಪ್ರದೇಶ ವಿಸ್ತರಣೆ, ನೀರು ಸಂಗ್ರಹಣಾ ಘಟಕಗಳು, ಸಂರಕ್ಷಿತ ಬೇಸಾಯದಡಿ ನೆರಳು ಪರದೆ, ಸಮಗ್ರ ರೋಗ ಅಥವಾ ಕೀಟ ನಿರ್ವಹಣೆ, ಪ್ಯಾಕ್ ಹೌಸ್, ಈರುಳ್ಳಿ, ಶೇಖರಣಾ ಘಟಕ ಮತ್ತು ತಳ್ಳುವ ಗಾಡಿ ಶೈತ್ಯಾಗಾರ ಘಟಕಗಳಿಗೆ ಸಹಾಯಧನ ಸೌಲಭ್ಯಗಳಿರುತ್ತವೆ. ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಹೊಸ ಪ್ರದೇಶ ವಿಸ್ತರಣೆ ಕಾರ್ಯಕ್ರಮದಡಿಯಲ್ಲಿ ಹಣ್ಣಿನ ಬೆಳೆಗಳಾದ ದಾಳಿಂಬೆ, ನುಗ್ಗೆ ಮತ್ತು ಡ್ರ್ಯಾಗನ್ ಫ್ರೂಟ್, ವಿನೂತನ ತಂತ್ರಜ್ಞಾನ ಕಾರ್ಯಕ್ರಮದಡಿ ಸೋಲಾರ ಪಂಪ್ ಖರೀದಿಸಲು ಅವಕಾಶವಿರುತ್ತದೆ. ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ, ಹನಿ ನೀರಾವರಿ ಯೋಜನೆ ಹಾಗೂ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಕಾರ್ಯಕ್ರಮಗಳಿದ್ದು ರೈತರಿಗೆ ಸಹಾಯಧನ ಸೌಲಭ್ಯಗಳಿರುತ್ತವೆ.

ಆಸಕ್ತ ರೈತರು ಹೊಸಪೇಟೆಯ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿ ಹಾಗೂ ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿಗಳನ್ನು ಸಂಪರ್ಕಿಸಬಹುದು. ಅಥವಾ ಹೊಸಪೇಟೆಯ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ದೂ.8310291867, ಕಮಲಾಪುರದ ಸಹಾಯಕ ತೋಟಗಾರಿಕೆ ಅಧಿಕಾರಿ ದೂ.8123465548, ಹೊಸಪೇಟೆಯ ಸಹಾಯಕ ತೋಟಗಾರಿಕೆ ಅಧಿಕಾರಿ ದೂ.9902087236, ಮರಿಯಮ್ಮನ ಹಳ್ಳಿಯ ಸಹಾಯಕ ತೋಟಗಾರಿಕೆ ಅಧಿಕಾರಿ ದೂ.8073719905 ಗೆ ಸಂಪರ್ಕಿಸಬಹುದಾಗಿದೆ ಎಂದು ಹೊಸಪೇಟೆಯ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ತಿಳಿಸಿದ್ದಾರೆ.

# ಮೂರು ತಿಂಗಳಿಗೊಮ್ಮೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಿ

ಮೊದಲ ಪುಟದಿಂದ

ತಾಲ್ಲೂಕಿನ ಸರ್ಕಾರಿ ನೌಕರರಿಗೆ ಆರೋಗ್ಯ ತಪಾಸಣಾ ಶಿಬಿರದಲ್ಲಿ ಮಾತನಾಡಿದರು. ಆಧುನಿಕ ಜೀವನ ಶೈಲಿಯನ್ನು ಬದಲಾಯಿಸಿ ಕೊಳ್ಳಿ, ಆರೋಗ್ಯಕರ ಅಭ್ಯಾಸವನ್ನು ಇಟ್ಟು ಕೊಳ್ಳುವುದು, ಸರಿಯಾದ ಆಹಾರ ಕ್ರಮ, ಪ್ರತಿದಿನ ವ್ಯಾಯಾಮ, ಸರಿಯಾದ ನಿದ್ರೆ, ಒತ್ತಡದ ನಿರ್ವಹಣೆಯ ಬಗ್ಗೆ ಮಾಹಿತಿ ನೀಡಿದರು.
ಸರ್ಕಾರಿ ನೌಕರರ ಸಂಘ ದ ಅಧ್ಯಕ್ಷ ಎಸ್ ರಾಮಪ್ಪ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಅರ್ಜುನ್ ಪರಸಪ್ಪ ಶಾಲಾ ಮುಖ್ಯೊ ್ಯಪಾಧ್ಯಯರು, ಬಸವ'ರಾಜ್ ಸಂಗಪ್ಪ. ಜಿಲ್ಲಾ ಶಿಕ್ಷಕರ ಸಂಘದ ಅಧ್ಯಕ್ಷರು, ವೆಂಕಟೇಶ್ ಬಾಗ್ಲಾರ್ ಪ್ರಧಾನ ಕಾರ್ಯದರ್ಶಿಗಳು, ಡಾ. ಆದಿತ್ಯ ಪಾಟೀಲ್, ಡಾ. ದೀಪ್ತಿ, ಭುವನೇಶ್ವರಿ ಸಿಜಿ ಕ್ಷೇತ್ರ ಆರೋಗ್ಯ ಶಿಕ್ಷಣಧಿಕಾರಿಗಳು, ರುದ್ರಚಾರಿ ಸೀನಿಯರ್ ಆರೋಗ್ಯ ನಿರೀಕ್ಷಣಾಧಿಕಾರಿಗಳು, ತ್ಯಾಗರಾಜ್, ಪಿ.ಹೆಚ್. ಸಿ ಓ. ಲ್ಯಾಬ್ ಟೆಕ್ನಿಶಿಯನ್, ಇತರರು ಉಪಸ್ಥಿತರಿದ್ದರು.

ಜಾಹೀರಾತಿಗಾಗಿ ಸಂಪರ್ಕಿಸಿ
9448633038

SSV EXCELLENT
SPOKEN ENGLISH CLASS, HOSPET
ಪ್ರಿಯ ಪೋಷಕರೇ ಹಾಗೂ ವಿದ್ಯಾರ್ಥಿಗಳೇ,
ನಮ್ಮ SSV ಯಲ್ಲಿ 1ರಿಂದ 9ನೇ ತರಗತಿ
ಓದುವ ಮಕ್ಕಳಿಗೂ ಮತ್ತು ಎಲ್ಲಾ ಸ್ಪರ್ಧಾತ್ಮಕ
ಪರಿಕ್ಷೆ ಬರೆಯುವ ವಿದ್ಯಾರ್ಥಿಗಳಿಗಾಗಿ
ಕಲಿಕೆಯ ತರಗತಿಗಳನ್ನು ನಡೆಸಲಾಗುತ್ತದೆ.
ಆಸಕ್ತಿಯುಳ್ಳ ಪೋಷಕರು ಹಾಗೂ ವಿದ್ಯಾರ್ಥಿಗಳು
ಇಂದೇ ನಿಮ್ಮ ಹೆಸರನ್ನು ನೋಂದಾಯಿಸಬಹುದು.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
A. ಮೂರ್ತಿ–99863 38861
M.C. ಪ್ರೇಮ –91643 71478

## ವರುಷ ಪೂರೈಸಿದ ಪತ್ರಿಕೆಗೆ ಓದುಗರ ಒಡಲಾಳದ ಅಭಿಮತ

# ಓದುಗರ ಮನ ತಣಿಸಿದ ದಿನಪತ್ರಿಕೆ

ಹಂಪಿ ಟೈಮ್ಸ್ ಆರಂಭಿಸಿ ಇಂದಿಗೆ ಒಂದು ವರುಷ ಸಾಕಾರಗೊಳಿಸಿದೆ ಸಾವಿರಾರು ಓದುಗರ ಹರುಷ ಇಂದಿನ ಆಧುನಿಕ ಜೀವನ ಶೈಲಿಯಲ್ಲಿ ದಿನಪತ್ರಿಕೆಗಳನ್ನು ಓದುವುದಕ್ಕೆ ಸಮಯವೇ ಸಿಗುತ್ತಿಲ್ಲ ಎಂಬ ನೆಪವೊಡ್ಡಿ ಪತ್ರಿಕೆಗಳೆಂದರೆ ಅಸಡ್ಡೆ ತೋರುವ ಮತ್ತು ಪತ್ರಿಕೆಗಳ ಓದುಗರ ಸಂಖ್ಯೆ ಕ್ಷೀಣಿಸುತ್ತಿರುವ ಇಂದಿನ ತಂತ್ರಜ್ಞಾನ ಯುಗದಲ್ಲಿ ಅತ್ಯಂತ ಕಡಿಮೆ ಅವಧಿಯಲ್ಲಿ ನಮ್ಮ ಹಂಪಿ ಟೈಮ್ಸ್ ದಿನಪತ್ರಿಕೆ ಮುದ್ರಿತ ಮತ್ತು ವರ್ಣಮಯ ಇ–ಪೇಪರ್ ಮೂಲಕ ನಮ್ಮ ಜಿಲ್ಲೆಯ, ರಾಜ್ಯದ ಮತ್ತು ವಿವಿಧ ರಾಜ್ಯಗಳಲ್ಲಿರುವ ಕನ್ನಡಿಗರ ಹಾಗೂ ಬೇರೆ ಬೇರೆ ದೇಶಗಳಲ್ಲಿರುವ ಕನ್ನಡಿಗರ ನೆಚ್ಚಿನ ಪತ್ರಿಕೆಯಾಗಿದೆ. ನಿಖರವಾದ, ಸ್ಪಷ್ಟವಾದ, ಸುದ್ದಿ, ಲೇಖನಗಳ ಮೂಲಕ ನಿತ್ಯ 70,000 ಓದುಗರ ಮನ ತಣಿಸುತ್ತಿದೆ. ರಾಜ್ಯದ ಪ್ರಮುಖ ಸುದ್ದಿಗಳ ಮೂಲಕ ಮುಖಪುಟದಲ್ಲೇ ಆಕರ್ಷಿಸಿ ಸಕಾರಾತ್ಮಕ ಚಿಂತನೆಗೆ ಹಚ್ಚುತ್ತಾ, ವಿಜ್ಞಾನ ಕಾಲಂ ಮೂಲಕ ವೈಜ್ಞಾನಿಕ ಜಗತ್ತನ್ನು ಪರಿಚಯಿಸುತ್ತದೆ. ತುಂಭದ್ರಾ ನೀರಿನ ಮಟ್ಟ ಕಾಲಂ ಮೂಲಕ ಅಣೆಕಟ್ಟಿನಲ್ಲಿರುವ ನೀರಿನ ಮಟ್ಟ ಒಳ ಮತ್ತು ಹೊರ ಹರಿವುಗಳ ಮೂಲಕ ರೈತರಿಗೆ ಅತ್ಯವಶ್ಯಕ ಮಾಹಿತಿಯನ್ನು ನೀಡುತ್ತದೆ. ನಿತ್ಯ ಪಂಚಾಂಗ ಮತ್ತು ಬೇಕಾಗಿದ್ದಾರೆ ಕಾಲಂ ಮೂಲಕ ಆಸಕ್ತರಿಗೆ ಮಾಹಿತಿಯನ್ನು ನೀಡುತ್ತದೆ. ಪತ್ರಿಕಾ ರಂಗದಲ್ಲಿ ಹೊಸದನ್ನು ಓದುಗರಿಗೆ ನೀಡಬೇಕೆಂಬ ಹಂಬಲದಿಂದ ನೀವು ಬರೆಯಬಹುದು ಎನ್ನುತ್ತಾ ಬರಹಗಾರರಿಗೆ ಉತ್ತೇಜಿಸಿ ವೇದಿಕೆ ಒದಗಿಸುತ್ತಿರುವ ಸಂಪಾದಕರ ಅವಿರತಶ್ರಮ ಪತ್ರಿಕೆಯ ಯಶಸ್ಸಿನಲ್ಲಿ ಮಹತ್ವದ್ದಾಗಿದೆ. ಸೂಕ್ತ ಲೇಖನಗಳನ್ನು ಪತ್ರಿಕೆಯಲ್ಲಿ ಪ್ರಕಟಿಸುತ್ತಾ ಒಂದೇ ವರ್ಷದಲ್ಲಿ ನಮ್ಮ ಹಂಪಿ ಟೈಮ್ಸ್ ರಾಜ್ಯದ ಅತ್ಯುತ್ತಮ ದಿನಪತ್ರಿಕೆಯಾಗಿದೆ.

**– ಸಂಗಮೇಶ ಹೂಗಾರ**
ಬಿ.ಡಿ.ಸಿ.ಸಿ ಬ್ಯಾಂಕ್ ಹೊಸಪೇಟೆ

# 30 ದಿನಗಳ ಕೌಶಲ್ಯಾಧಾರಿತ ತರಬೇತಿಗೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

ಸ್ವಯಂ ಉದ್ಯೋಗ ಪ್ರಾರಂಭಿಸುವ ಆಸಕ್ತರುಗಳಿಗಾಗಿ ಹೊಸಪೇಟೆನಲ್ಲಿ ಕಂಪ್ಯೂಟರ್ ಹಾರ್ಡ್‌ವೇರ್ ಮತ್ತು ನೆಟ್‌ವರ್ಕಿಂಗ್ ಬಗ್ಗೆ 30 ದಿನಗಳ ಕೌಶಲ್ಯಾಧಾರಿತ ತರಬೇತಿಯನ್ನು ಜುಲೈ 2024 ಎರಡನೇ ವಾರದಿಂದ ಹಮ್ಮಿಕೊಳ್ಳಲಾಗುವುದು. ಜಿಲ್ಲೆಯ ಯಾವುದೇ ತಾಲೂಕಿನ ಅಭ್ಯರ್ಥಿಗಳು ಈ ತರಬೇತಿಯಲ್ಲಿ ಭಾಗವಹಿಸಬಹುದಾಗಿದೆ. ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಕಲಬುರಗಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ ಹಾಗೂ ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ(ಸಿಡಾಕ್), ವಿಜಯನಗರ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗುವದು.

ಸದರಿ ಕಾರ್ಯಕ್ರಮದಲ್ಲಿ ಆಯಾ ವೃತ್ತಿಗಳಲ್ಲಿ ಕೌಶಲ್ಯದ ಪ್ರಾಯೋಗಿಕ ಹಾಗೂ ಸಿದ್ಧಾಂತದೊಂದಿಗೆ ಸ್ವಯಂ ಉದ್ಯಮಗಳ ಬಗ್ಗೆ ಮಾಹಿತಿ, ಉದ್ಯಮಶೀಲತೆ, ಯಶಸ್ವಿ ಉದ್ಯಮಶೀಲರ ಗುಣಲಕ್ಷಣಗಳು, ಉದ್ಯಮಗಳನ್ನು ಪ್ರಾರಂಭಿಸುವ ಹಂತಗಳು, ಸ್ವಯಂ ಉದ್ಯೋಗಕ್ಕೆ ಇರುವ ಸರ್ಕಾರದ ಯೋಜನೆಗಳು, ಬ್ಯಾಂಕ್ ವ್ಯವಹಾರ ಮಾಡುವ ಬಗ್ಗೆ, ಸಾಲ ಮತ್ತು ಹಣಕಾಸು ಮತ್ತು ಹಣಕಾಸೇತರ ಸೌಲಭ್ಯಗಳ ಬಗ್ಗೆ, ಲೆಕ್ಕ ಪತ್ರ ನಿರ್ವಹಣೆ, ಯೋಜನಾ ವರದಿ ತಯಾರಿಕೆ, ಸಾಲ ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸುವಲ್ಲಿ ಸಹಾಯ ನೀಡುವದು ಮತ್ತು ಸಂಬಂಧಪಟ್ಟ ಇತ್ಯಾದಿ ವಿಷಯಗಳ ಬಗ್ಗೆ ಅನುಭವಿ ಅತಿಥಿ ಬೋಧಕರಿಂದ ಉಪನ್ಯಾಸ, ಮಾಹಿತಿ ನೀಡಲಾಗುವುದು. ಯಶಸ್ವಿಯಾಗಿ ತರಬೇತಿ ಪೂರ್ಣಗೊಳಿಸಿದವರಿಗೆ ಪ್ರಮಾಣ ಪತ್ರ ನೀಡಲಾಗುವುದು. ಸ್ವಯಂ ಉದ್ಯಮಗಳನ್ನು ಪ್ರಾರಂಭಿಸಲು ಅರ್ಹರಿಗೆ ಸರ್ಕಾರಿ ಯೋಜನೆ ಅಡಿಯಲ್ಲಿ ಬ್ಯಾಂಕ್ ಸಾಲ ಸೌಲಭ್ಯಕ್ಕಾಗಿ ಶಿಫಾರಸ್ಸು ಮಾಡಲಾಗುವದು. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಸಕ್ತರಿರುವ 18 ರಿಂದ 40 ವರ್ಷದೊಳಗಿನ, ಕನಿಷ್ಠ ಎಸ್.ಎಸ್.ಎಲ್.ಸಿ ಪಾಸ್ ಆದ ಎಲ್ಲಾ ವರ್ಗದ ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳು ಜೂನ್ 29 ರೊಳಗಾಗಿ ಮೋ.ಸಂ: 6362681190, 7204016012, 9986332736 ಇಲ್ಲಿಗೆ ಕರೆ ಮಾಡಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹ್ಮದಾಗಿದೆ. 30 ಅಭ್ಯರ್ಥಿಗಳ ತಂಡದಲ್ಲಿ ಪರಿಶಿಷ್ಟ ಜಾತಿ ಅಭ್ಯರ್ಥಿಗಳಿಗೆ ಶೇ.35 ರಷ್ಟು ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಶೇ.15 ರಷ್ಟು ಆದ್ಯತೆ ನೀಡಲಾಗುವದು ಎಂದು ಸಿಡಾಕ್‌ನ ಜಂಟಿ ನಿರ್ದೇಶಕರಾದ ಶ್ರೀ ಜಿ. ಯು. ಹುಡೇದ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

14 ಭಾಷೆ
ಈಗ ನಿಮ್ಮ ಮಾತೃ ಭಾಷೆಯಲ್ಲಿ
ಸುದ್ದಿ, ಲೇಖನ ಓದಿರಿ...
www.hampitimes.com

## ಸಾರ್ವಜನಿಕ ನೋಟೀಸು

ಇದರಲ್ಲಿ ಶ್ರೀ.ವಾಯ್.ಎನ್.ಕುರಹಟ್ಟಿ, ವಕೀಲರು–ಗದಗ, ಸಾ॥ ಅಂತೂರ–ಬೆಂತೂರ. ತಾ॥ಜಿ॥ ಗದಗ. ನಮ್ಮ ಪಕ್ಷಗಾರರಾದ ಶ್ರೀಮತಿ ಆಶಾ ಮಹೇಂದ್ರಕರ, ವಯಾ: 35ವರ್ಷ, ಉದ್ಯೋಗ: ಖಾಸಗಿ ಕೆಲಸ, ಸಾ॥ ಕೆರೂರ ತಾ॥ಬದಾಮಿ, ಜಿ॥ ಬಾಗಲಕೋಟಿ, ಇವರು ನೀಡಿದ ಮಾಹಿತಿ, ವ ಅಧಿಕಾರದ ಮೇಲಿಂದ ಈ ಮೂಲಕ ಕೊಡುವ ಸಾರ್ವಜನಿಕ ನೋಟಿಸು ಏನೆಂದರೆ. ಗದಗ ಜಿಲ್ಲೆ ಗದಗ ತಾಲ್ಲೂಕ ಅಸುಂಡಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಮಲ್ಲಸಮುದ್ರ ಗ್ರಾಮದ ಬಿನ್ ಶೇತ್ಕಿ ವಾಸದ ಉದ್ದೇಶದ ಜಾಗೆಗಳು ರಿ.ಸ.ನಂ. 62/3+4+5+1ಅ/2, ಪ್ಲಾಟ ನಂ.35 ಸ್ವತ್ತಿನ ಸಂಖ್ಯೆ. 151400100300224220, ಇದರ ವಿಸ್ತೀರ್ಣ ಪೂರ್ವ–ಪಶ್ಚಿಮ: 15.00ಮೀಟರ, ಉತ್ತರ–ದಕ್ಷಿಣ: 4.00 ಮೀಟರ, ಒಟ್ಟು 60.ಚ.ಮೀ, ಇದರ ಚಕಬಂದಿ. ಪೂರ್ವಕ್ಕೆ–ಪ್ಲಾಟ ನಂ.42, ಪಶ್ಚಿಮಕ್ಕೆ: 9ಮೀ, ರಸ್ತೆ, ಉತ್ತರಕ್ಕೆ: ರಿ.ಸ.ನಂ.62/1ಅ/1, ದಕ್ಷಿಣಕ್ಕೆ: ಪ್ಲಾಟ ನಂ.36 ಈ ಚಕ ಬಂದಿ ಮಧ್ಯದಲ್ಲಿರುವುದು ಹಾಗೂ ರಿ.ಸ.ನಂ.62/3+4+5+1ಅ/2 ಪ್ಲಾಟ ನಂ. 36 ಇದರ ಸ್ವತ್ತಿನ ಸಂಖ್ಯೆ. 151400100300224221 ಇದರ ವಿಸ್ತೀರ್ಣ, ಪೂರ್ವ–ಪಶ್ಚಿಮ:15.00ಮೀಟರ, ಉತ್ತರ–ದಕ್ಷಿಣ: 9.00ಮೀಟರ ಒಟ್ಟು 135 ಚ.ಮೀಟರ ಇದು ಪೂರಾ ಇದರ ಚಕ್ ಬಂದಿ ಪೂರ್ವಕ್ಕೆ: ಪ್ಲಾಟ ನಂ.41, ಪಶ್ಚಿಮಕ್ಕೆ: 9ಮೀಟರ ರಸ್ತೆ, ಉತ್ತರಕ್ಕೆ: ಪ್ಲಾಟ ನಂ.35, ದಕ್ಷಣಕ್ಕೆ: ಪ್ಲಾಟ ನಂ. 37 ಈ ಚಕ ಬಂದಿ ಮಧ್ಯದಲ್ಲಿರುವುದು. ಈ ಎರಡು ಆಸ್ತಿಗಳನ್ನು ಅದರ ಮಾಲೀಕರು, ವ ಕಬ್ಜಾದರರಾದ ಕೇಶವ ತಂದೆ ಬಲವಂತ ಕಲಾಲ ಸಾ॥ ಹೊಸಪೇಟೆ, ತಾ॥ಜಿ॥ ವಿಜಯನಗರ ಇವರ ಆಧಾರ ಸಂಖ್ಯೆ: 573994755470, ಇವರ ಕಡೆಯಿಂದ ನಮ್ಮ ಪಕ್ಷಗಾರರು ಗದಗ ಹಿರಿಯ ಉಪನೋಂದಣಾಧಿಕಾರಿಗಳು ಗದಗ ಇವರ ಕಛೇರಿಯಲ್ಲಿ ನೋಂದಪೂರ್ವಕವಾಗಿ ಖರೀದಿಗೆ ಹಿಡಿಯುವವರು ಇರುತ್ತಾರೆ.

ಸದರ ಆಸ್ತಿಗಳಿಗೆ ಸಂಬಂಧಿಸಿದಂತೆ ಯಾರದ್ದಾದರು ಯಾವುದೇ ರೀತಿಯಾದ ಹಕ್ಕು,ವ ಹಿತ್ತಾಸಕ್ತಿ, ವ್ಯಾಜ್ಯ ವ ತಂಟೇ ತಕರಾರು ವಗೈರೇ ಇದ್ದಲ್ಲಿ ಸಂಬಂಧಿಸಿದ ಕಾಗದ ಪತ್ರಗಳೂಂದಿಗೆ ಲೇಖಿ ಮುಖಾಂತರ ಈ ಕೆಳಗೆ ಕಾಣಿಸಿದ ವಿಳಾಸಕ್ಕೆ ಈ ನೋಟೀಸು ಪ್ರಕಟವಾದ 7 ದಿನಗಳ ಒಳಗಾಗಿ ಸಲ್ಲಿಸತಕ್ಕದ್ದು. ಅವಧಿಯೊಳಗೆ ಯಾವುದೇ ತಕರಾರು ಬರದಿದ್ದ ಪಕ್ಷದಲ್ಲಿ ನಮ್ಮ ಪಕ್ಷಗಾರರು ಯಾರದು, ಯಾವುದೂ, ತಕರಾರು ಇಲ್ಲ ಅಂತಾ ಖರೀದಿ ಮಾಡುವವರು ಇರುತ್ತಾರೆ ತಿಳಿಯಿರಿ ಅಂತಾ ಕೊಟ್ಟ ಸಾರ್ವಜನಿಕ ನೋಟೀಸು.

ಸ್ಥಳ : ಗದಗ
ದಿನಾಂಕ : 22/06/2024

**ಶ್ರೀ. ವಾಯ್.ಎನ್.ಕುರಹಟ್ಟಿ**
**ವಕೀಲರು–ಗದಗ, ಸಾ॥ ಅಂತೂರ–ಬೆಂತೂರ. ತಾ॥ಜಿ॥ಗದಗ**
**ಮೋ ನಂ. 9740271237**

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA